# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper

70,000

HAMPI TIMES E-PAPER READERS

94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:01 • ಸಂಚಿಕೆ:344 • ನೋಂದಣಿ ಸಂ.:KARKAN27911 • ವಿಜಯನಗರ • 19.06.2024 • ಬುಧವಾರ • ಪುಟ:04 • ಬೆಲೆ:2

Volume:01 • Issue:344 • Reg.No:KARKAN27911 • VIJAYANAGARA • 19.06.2024 • Wednesday • Page:04 • Rs:2



ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.


## ವಿಜಯನಗರ ಜಿಲ್ಲೆಗೆ 8576 ಲಕ್ಷ ರೂ.ಬೆಳೆವಿಮೆ ಬಿಡುಗಡೆ

# ರೈತರು ಖಾತೆ ಚೆಕ್ ಮಾಡ್ಕೊಳ್ಳಿ

### ಹರಪನಹಳ್ಳಿ ತಾಲೂಕಿನಲ್ಲಿ 20394 ರೈತರಿಗೆ ಬೆಳೆವಿಮೆ | ಹೊಸಪೇಟೆ ತಾಲೂಕಿನಲ್ಲಿ 212 ರೈತರಿಗೆ ಜಮೆ

### ಬೆಳೆ ವಿಮೆ ನೋಂದಣಿಗೆ ಹರಪನಹಳ್ಳಿ ತಾಲೂಕು ಗರಿಷ್ಠ | ಹೊಸಪೇಟೆ ತಾಲೂಕಿನಲ್ಲಿ ಕಡಿಮೆ

■ **ಹಂಪಿ ಟೈಮ್ಸ್ ಹೊಸಪೇಟೆ**

2023-24ನೇ ಸಾಲಿನ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ನೋಂದಾಯಿಸಿದ ರೈತರಿಗೆ ಮೆಕ್ಕೆಜೋಳ, ಜೋಳ, ಸಜ್ಜೆ, ಸೂರ್ಯಕಾಂತಿ, ಶೇಂಗಾ, ನವಣೆ, ರಾಗಿ ಈರುಳ್ಳಿ, ಟೊಮೊಟೊ ಬೆಳೆಗಳಿಗೆ ಬೆಳೆ ವಿಮೆ ಬಿಡುಗಡೆಯಾಗಿದೆ.



2023-24ನೇ ಸಾಲಿನ ಮುಂಗಾರು ಹಂಗಾಮಿಗೆ ಒಟ್ಟು 8576.68 ಲಕ್ಷ ರೂ. ಬೆಳೆ ವಿಮೆ ಬಿಡುಗಡೆಯಾಗಿದೆ.

ಹಡಗಲಿ ತಾಲೂಕಿಗೆ 1071.72 ಲಕ್ಷ ರೂ., ಹಗರಿಬೊಮ್ಮನಹಳ್ಳಿ ತಾಲೂಕಿಗೆ 256.62 ಲಕ್ಷ ರೂ., ಹರಪನಹಳ್ಳಿ ತಾಲೂಕಿಗೆ 6101.63 ಲಕ್ಷ ರೂ., ಹೊಸಪೇಟೆ ತಾಲೂಕಿಗೆ 38.05 ಲಕ್ಷ ರೂ., ಕೊಟ್ಟೂರು ತಾಲೂಕಿಗೆ 491.81 ಲಕ್ಷ ರೂ., ಕೂಡ್ಲಿಗಿ ತಾಲೂಕಿಗೆ 616.85 ಲಕ್ಷ ರೂ. ಬಿಡುಗಡೆಯಾಗಿದೆ.

ಹಡಗಲಿ ತಾಲೂಕಿನಲ್ಲಿ 3382, ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 708, ಹರಪನಹಳ್ಳಿ ತಾಲೂಕಿನಲ್ಲಿ 20394, ಹೊಸಪೇಟೆ ತಾಲೂಕಿನಲ್ಲಿ 212, ಕೊಟ್ಟೂರು ತಾಲೂಕಿನಲ್ಲಿ 2402, ಕೂಡ್ಲಿಗಿ ತಾಲೂಕಿನಲ್ಲಿ 2412 ರೈತರು ಈ ಬೆಳೆ ವಿಮೆ ಪಡೆಯುತ್ತಿದ್ದಾರೆ.

ಬೆಳೆ ವಿಮೆಗೆ ನೋಂದಾಯಿಸಿದ ರೈತರು ಬೆಳೆ ವಿಮಾ ಕಂತು ತುಂಬಿದ ಬ್ಯಾಂಕ್‌ಖಾತೆಯನ್ನು ಪರಿಶೀಲಿಸಿಕೊಳ್ಳಲು ಕೋರಿದೆ. ಬೆಳೆ ವಿಮಾ ಜಮೆ ಆಗದಿದ್ದಲ್ಲಿ ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ ಹಾಗೂ ತಮ್ಮ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗಳಿಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ಪ್ರಸಕ್ತ ಸಾಲಿನಲ್ಲಿಯೂ ಸಹ ಉತ್ತಮ ಮಳೆ ಆಗುವುದೆಂಬ ಅಂದಾಜಿರುವುದರಿಂದ ಎಲ್ಲಾ ರೈತ ಬಾಂಧವರು ಕಡ್ಡಾಯವಾಗಿ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಲು ಮನವಿ ಮಾಡಲಾಗಿದೆ ಎಂದು ವಿಜಯನಗರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ಪೆಟ್ರೋಲ್, ಡೀಸೆಲ್ ದರ ಏರಿಕೆಗೆ ಬಿಜೆಪಿ ಆಕ್ರೋಶ

### ಎತ್ತಿನಗಾಡಿಯಲ್ಲಿ ತಾಲೂಕು ಕಚೇರಿಗೆ ಪ್ರತಿಭಟನಕಾರರು



■ **ಹಂಪಿ ಟೈಮ್ಸ್ ಹೊಸಪೇಟೆ**

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಪೆಟ್ರೋಲ್, ಮತ್ತು ಡೀಸೆಲ್ ಬೆಲೆ ಏರಿಕೆ ಮಾಡಿ ಜನರ ಬದುಕಿಗೆ ಬರೆ ಎಳೆದಿದ್ದಾರೆ. ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗಲಿದ್ದು, ಜನಸಾಮಾನ್ಯರು ಕೂಲಿ ಹಣವನ್ನು ತೈಲಕ್ಕೆ ಸುರಿಯಬೇಕಾಗಿದೆ. ಕೂಡಲೇ ಸರ್ಕಾರ ತೈಲ ಬೆಲೆ ಇಳಿಕೆ ಮಾಡಬೇಕು. ಇಲ್ಲದಿದ್ದರೆ ಬೆಲೆ ಇಳಿಸೋವರೆಗೂ ಹೋರಾಟ ಮಾಡುತ್ತೇವೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಚೆನ್ನಬಸವನಗೌಡ ಪಾಟೀಲ ಎಚ್ಚರಿಸಿದರು.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ, ವಿಜಯನಗರ ಜಿಲ್ಲಾ ಬಿಜೆಪಿ ಘಟಕ ವತಿಯಿಂದ ನಗರದ ಜೈಭೀಮ್ ವೃತ್ತದಲ್ಲಿ ಸೈಕಲ್ ಮತ್ತು ಎತ್ತಿನ ಬಂಡಿಗಳ ಮೂಲಕ ಪ್ರತಿಭಟನೆ ನಡೆಸಲಾಯಿತು. ಪಕ್ಷದ ಜಿಲ್ಲಾಧ್ಯಕ್ಷ ಚೆನ್ನಬಸವನಗೌಡ ಪಾಟೀಲ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಕ್ಷದ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಬಳಿಕ ಜೈಭೀಮ್ ವೃತ್ತದಿಂದ ಸೈಕಲ್ ಮತ್ತು ಎತ್ತಿನಗಾಡಿ ಮೂಲಕ ಸಾಗಿ ಬಂದ ಕಾರ್ಯಕರ್ತರು ತಾಲೂಕು ಕಚೇರಿಗೆ ತೆರಳಿ ತಹಶೀಲ್ದಾರ್ ವಿಶ್ವಜಿತ್ ಮೆಹತಾ ಅವರ ಮೂಲಕ ಸಿಎಂ ಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ರಾಜ್ಯ ಎಸ್ಟಿ ಮೋರ್ಚಾ ಅಧ್ಯಕ್ಷ ಬಂಗಾರು ಹನುಮಂತ, ಯುವ ಮುಖಂಡ ಸಂದೀಪಸಿಂಗ್, ಜಿಲ್ಲಾ ಕಾರ್ಯದರ್ಶಿ ಕೆ.ಎಸ್. ರಾಘವೇಂದ್ರ, ಯುವ ಘಟಕದ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ, ಮುಖಂಡರಾದ ಸಂಜೀವರೆಡ್ಡಿ, ನಂಜನಗೌಡ, ಓದೋ ಗಂಗಪ್ಪ, ಈ.ಟಿ.ಲಿಂಗರಾಜ, ಸಾಲಿಸಿದ್ದಯ್ಯ, ಜಗದೀಶ ಕಮಟಗಿ, ಮಂಡಲ ಅಧ್ಯಕ್ಷ ಶಂಕರಮೇಟಿ, ಕಾರ್ಯದರ್ಶಿ ಆರ್.ಕೆ.ನಾಗರಾಜ, ಶ್ರೀಕಾಂತ ಪೂಜಾರಿ ಸೇರಿದಂತೆ ಇತರರು ಇದ್ದರು.

# ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

### ದೈಹಿಕ ಶಿಕ್ಷಕರು ಜೂನ್ 25 ರೊಳಗಾಗಿ ಅರ್ಜಿ ಸಲ್ಲಿಸಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯ ಅಲ್ಪಸಂಖ್ಯಾತರ ಸರಕಾರಿ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ದೈಹಿಕ ಶಿಕ್ಷಣ ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

6ನೇ ತರಗತಿಯಿಂದ 10ನೇ ತರಗತಿ ವರೆಗಿನ ಈ ಶಾಲೆಯಲ್ಲಿನ ದೈಹಿಕ ಶಿಕ್ಷಣ ಅತಿಥಿ ಶಿಕ್ಷಕರ ಹುದ್ದೆಗೆ ಆಸಕ್ತ ಬಿಎ ಬಿ.ಪಿ.ಎಡ್ ಪದವೀಧರರು ಜೂನ್ 25 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಪ್ರಾಂಶುಪಾಲರಾದ ಮಂಜುನಾಥ ಪಾಟೀಲ್ ಅವರ ಮೊ: 9945951963, 9964732718 ಗೆ ಕರೆ ಮಾಡಿ ಸಂಪರ್ಕಿಸಬಹುದು ಎಂದು ಮೌಲಾನಾ ಆಜಾದ್ ಮಾದರಿ ಶಾಲೆಯ ಮುಖ್ಯಾಧ್ಯಾಪಕರು ತಿಳಿಸಿದ್ದಾರೆ.

# ಕೊಪ್ಪಳ ವಿವಿಯ ಸ್ನಾತಕೋತ್ತರ ಕೇಂದ್ರಕ್ಕೆ ಚಾಲನೆ ಇಂದು

■ **ಹಂಪಿ ಟೈಮ್ಸ್ ಕೊಪ್ಪಳ:**

ಕೊಪ್ಪಳ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದ ತರಗತಿಗಳು ಗಂಗಾವತಿಯ ಹಳೆ ತಹಸೀಲ್ದಾರ ಕಚೇರಿಯಲ್ಲಿ ಜೂ19ರಂದು ಬೆಳಿಗ್ಗೆ 8.30ಕ್ಕೆ ಶಾಸಕ ಜನಾರ್ಧನ ರೆಡ್ಡಿ ಉದ್ಘಾಟಿಸುವರು. ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಕುಲಸಚಿವರು, ಯಲಬುರ್ಗಾ ಮತ್ತು ಕೊಪ್ಪಳದ ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರು ಉಪಸ್ಥಿತರಿರುವರು ಎಂದು ವಿಶ್ವ ವಿದ್ಯಾಲಯದ ತಿಳಿಸಿದೆ


S.M.TRADERS & SERVICES
ATLAS COPCO
COMPRESSORS, HOSEPIPE, DRILL RODS, SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201

ನೀವು ಜಾಹೀರಾತು ನೀಡಲು ಬಯಸುತ್ತೀರಾ?
are you want place native advertisements
Contact for Details
94825 99089
94486 33038

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL VOCAL - KARNATIC AND FILM MUSIC Classes
contact for more information
91082 26938
90368 65666
Near Honda Showroom, Hosapete-583201


# ಭವಿಷ್ಯದ ಉಸಿರಾಟಕ್ಕೆ ಪರಿಸರ ಸಂರಕ್ಷಿಸಿ

### ವಾಸವಿ ಯುವಜನ ಸಂಘದಿಂದ ಪರಿಸರ ದಿನಾಚರಣೆಯಲ್ಲಿ ಜಿ ಲಕ್ಷ್ಮೀಪತಿ ಹೇಳಿಕೆ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪ್ರಕೃತಿ ನಮಗೇನು ನೀಡಿದೆ ಎನ್ನುವುದಕ್ಕಿಂತ ಪ್ರಕೃತಿಗೆ ನಮ್ಮ ಕೊಡುಗೆ ಏನು ಎಂಬುದು ಪ್ರಶ್ನೆಯಾಗಬೇಕು ಎಂದು ಆರ್ಯವೈಶ್ಯ ಸಂಘದ ಟ್ರಸ್ಟ್‌ನ ಅಧ್ಯಕ್ಷ ಜಿ.ಲಕ್ಷ್ಮೀಪತಿ ಅಭಿಪ್ರಾಯ ವ್ಯಕ್ತಪಡಿಸಿದರು.



> ಗಿಡಮರಗಳಿದ್ದರೆ ಪರಿಶುದ್ಧ ಗಾಳಿ. ಇಲ್ಲ ದಿದ್ದರೆ ಮನುಷ್ಯ ಅನಾರೋಗ್ಯಕ್ಕೀಡಾಗಿ, ಉಸಿರು ಚೆಲ್ಲಬೇಕಾಗುತ್ತದೆ. ಆರೋಗ್ಯವಾಗಿರಲು ಪರಿಸರ ಸಂರಕ್ಷಿಸಿ.
> – ಭರತ್, ರಾಜ್ಯ ಪ್ರಧಾನ ಕಾರ್ಯದರ್ಶಿ

ಪಟ್ಟಣದ ಶ್ರೀಕನ್ನಿಕಾಪರಮೇಶ್ವರಿ ದೇಗುಲದ ಆವರಣದಲ್ಲಿ, ವಾಸವಿ ಯುವ ಜನ ಸಂಘ ತಾಲೂಕು ಘಟಕದಿಂದ ಆಯೋಜಿಸಿದ್ದ, ಪರಿಸರ ದಿನಾಚರಣೆಯಲ್ಲಿ ಅವರು ಪಾಲ್ಗೊಂಡು ಮಾತನಾಡಿದರು. ವರ್ಷ ದಿಂದ ವರ್ಷಕ್ಕೆ ಬಿಸಿಲಿನ ಪ್ರಖರತೆ ಹೆಚ್ಚಾಗುತ್ತಿದ್ದು, ಬಿಸಿಲಿನ ತಾಪಮಾನಕ್ಕೆ ಜನರೆಲ್ಲಾ ತತ್ತರಿಸಿಹೋಗುತ್ತಿದ್ದಾರೆ. ಪರಿಸರ ನಾಶವಾಗುತ್ತಿರುವುದು ಗೊತ್ತಿದರೂ, ನಾವು ಇನ್ನೂ ಎಚ್ಚೆತ್ತುಕೊಳ್ಳುತ್ತಿಲ್ಲ ಎಂದರು. ಯುವ ಜನತೆ ಎಚ್ಚೆಚ್ಚು ಪರಿಸರವನ್ನು ಪ್ರೀತಿಸಬೇಕು. ಪರಿಸರ ರಕ್ಷಣೆಯಲ್ಲಿ ಯುವ ಜನತೆಯ ಪಾತ್ರ ದೊಡ್ಡದಿದೆ ಎಂದರು.

ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭಾದ ರಾಜ್ಯ ಪ್ರಧಾನ ಕಾರ್ಯ ದರ್ಶಿ ಭರತ್ ಗಂಗಾವತಿ ಮಾತನಾಡಿ, ನಾಶವಾಗುತ್ತಿರುವ ಪರಿಸರದ ಬಗ್ಗೆ ಕಾಳಜಿ ಇಲ್ಲವೆಂದರೆ, ಮುಂದೆ ಹಸಿರಿಲ್ಲದೆ, ಉಸಿರಿಲ್ಲ ಎನ್ನುವಂತ ಪರಿಸ್ಥಿತಿ ಬಂದೊದಗುತ್ತದೆ. ಆದ್ದರಿಂದ ಪ್ರತಿಯೊಬ್ಬರು ಸಸಿಗಳನ್ನು ನೆಟ್ಟು, ಉಳಿಸಿ ಬೆಳೆಸಬೇಕಿದೆ. ರಸ್ತೆ ಅಗಲೀಕರಣಕ್ಕೆಂದು ಒಂದು ಮರ ಕಡಿದರೆ 5 ಮರಗಳನ್ನು ನೆಡುವಂತಹ ಕಾರ್ಯವಾಗಬೇಕು ಎಂದು ಎಚ್ಚರಿಸಿದರು.

ವಾಸವಿ ಯುವಜನ ಸಂಘದ ಅಧ್ಯಕ್ಷ ಪ್ರವೀಣ್ ಬೇಲೂರು ಮಾತನಾಡಿ, ಪ್ರತಿ ವರ್ಷದಂತೆ ಈ ಬಾರಿಯೂ ಸಹ ನಾವು ಸಸಿಗಳನ್ನು ನೆಡುವ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ, ಇದು ಕೇವಲ ವರ್ಷಕ್ಕೊಮ್ಮೆ ಸಸಿಗಳನ್ನು ನೆಡುವುದಲ್ಲದೆ, ಅವುಗಳ ಸಂರಕ್ಷಣೆ ಕೂಡ ಮಾಡಲಾಗುತ್ತೆ ಎಂದರು.

ವಾಸವಿ ಮಹಿಳಾ ಸಮಾಜದ ಅಧ್ಯಕ್ಷೆ ವಿಜಯಲಕ್ಷ್ಮಿ ಹಾಗೂ ವಾಸವಿ ವನಿತಾ ಸಂಘದ ಅಧ್ಯಕ್ಷೆ ಪವನ ಸೇರಿದಂತೆ ಸರ್ವ ಸದಸ್ಯರು ಉಪಸ್ಥಿತರಿದ್ದರು.

# ಗ್ರಾಮೀಣ ಜನರ ಆರೋಗ್ಯ ತಪಾಸಣೆಗೆ ಜಿಂದಾಲ್‌ನಿಂದ ಸಂಚಾರಿ ಆರೋಗ್ಯ ಘಟಕ

### 3 ಸಂಚಾರಿ ಆರೋಗ್ಯ ಘಟಕಗಳಿಗೆ ಚಾಲನೆ | ಆರೋಗ್ಯ ಸೇವೆಗೆ ಕೈಜೋಡಿಸಿದ ಜೆಎಸ್‌ಡಬ್ಲ್ಯೂ



■ **ಹಂಪಿ ಟೈಮ್ಸ್ ಹೊಸಪೇಟೆ**

ಜೆಎಸ್‌ಡಬ್ಲ್ಯೂ ಫೌಂಡೇಶನ್ ಸಿಎಸ್‌ಆರ್ ಅಡಿ ಮಂಗಳವಾರ ತೋರಣಗಲ್ಲು ಓಪಿಜೆ ಕೇಂದ್ರದಲ್ಲಿ 3 ಸಂಚಾರಿ ಆರೋಗ್ಯ ಘಟಕಗಳಿಗೆ ಚಾಲನೆ ನೀಡಲಾಯಿತು.

ಬಳ್ಳಾರಿ ಜಿಲ್ಲಾ ಆರೋಗ್ಯ ಅಧಿಕಾರಿಗಳಾದ ಡಾ. ರಮೇಶ್ ಬಾಬು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ ಜೆಎಸ್‌ಡಬ್ಲ್ಯೂ ಫೌಂಡೇಶನ್ ಗ್ರಾಮೀಣ ಭಾಗದ ಜನರ ಆರೋಗ್ಯ ಕಾಪಾಡುವಲ್ಲಿ ಮಹತ್ತರ ಪಾತ್ರ ವಹಿಸಿದೆ ಮತ್ತು ಇನ್ನು ಹೆಚ್ಚಿನ ಜನರಿಗೆ ಆರೋಗ್ಯ ಸೇವೆಗಳು ತಲುಪಲು ಬೇಕಾದ ಅಗತ್ಯ ಸಹಕಾರವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಡಲಿದೆ ಎಂದು ತಿಳಿಸಿದರು.

ಜೆಎಸ್‌ಡಬ್ಲ್ಯೂ ಸ್ಟೀಲ್ ಲಿಮಿಟೆಡ್‌ನ ಸಿಇಒ ಎಲ್‌ಆರ್‌ಸಿಂಗ್ ಸಂಚಾರಿ ಆರೋಗ್ಯ ಘಟಕಗಳ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿ, ಜೆಎಸ್ ಡಬ್ಲ್ಯೂ ಫೌಂಡೇಶನ್‌ನ ಸಂಚಾರಿ ಆರೋಗ್ಯ ಘಟಕ ಗಳು 100 ಕ್ಕೂ ಹೆಚ್ಚು ಗ್ರಾಮಗಳ ಜನರಿಗೆ ಆರೋಗ್ಯ ಸೇವೆಗಳನ್ನು ಮನೆ ಬಾಗಿಲಿಗೆ ತಲುಪಿಸುತ್ತಿರುವುದು ಶ್ಲಾಘನೀಯ ಎಂದರು.

ಜೆಎಸ್‌ಡಬ್ಲ್ಯೂ ಫೌಂಡೇಶನ್‌ನ ಸಿ. ಎಸ್. ಆರ್ ಮುಖ್ಯಸ್ಥ ಪೆದ್ದಣ್ಣ ಬೀಡಲಾ ಮಾತನಾಡಿ, ಪ್ರತಿ ಸಂಚಾರಿ ಆರೋಗ್ಯ ಘಟಕದಲ್ಲಿ ವೈದ್ಯರು, ಫಾರ್ಮಸಿಸ್ಟ್, ಲ್ಯಾಬ್ ಟೆಕ್ನಿಷಿಯನ್, ಸಾಮಾಜಿಕ ಪ್ರಚಾರ ಅಧಿಕಾರಿ ಇದ್ದು ಜನರಿಗೆ (ಎ) ವೈದ್ಯರ ಪರೀಕ್ಷೆ (ಬಿ)ಪ್ರಯೋಗಾಲಯ ಸೇವೆಗಳು, (ಸಿ) ಸಮಾಲೋಚನೆ (ಡಿ) ಮನೆ ಭೇಟಿ (ಇ) ಉಚಿತ ಔಷಧಿ ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ರೆಫರಲ್ ಸೇವೆಗಳು ಲಭ್ಯವಿದೆ ಮತ್ತು ಈ ಸೇವೆಗಳಿಂದ ಜನರು ಪ್ರಾಥಮಿಕ ಹಂತದಲ್ಲಿ ಕಾಯಿಲೆಯನ್ನು ಗುರುತಿಸಿಕೊಳ್ಳುವುದರ ಮೂಲಕ ಆರೋಗ್ಯ ಸುಧಾರಿಸಿಕೊಳ್ಳಲು ನೆರವಾಗುತ್ತದೆ" ಎಂದು ತಿಳಿಸಿದರು.

ಕಾರ್ಯಕ್ರಮದ ಅನುಷ್ಠಾನ ಸಂಸ್ಥೆ ಹೆಲ್ಪ್ ಏಜ್ ಇಂಡಿಯಾ ರಾಜ್ಯ ಸಂಯೋಜಕ ಎಂ. ಪ್ರಕಾಶನ್, ಜೆಎಸ್‌ಡಬ್ಲ್ಯೂ ಸ್ಟೀಲ್ ನ ಹಿರಿಯ ಉಪಾಧ್ಯಕ್ಷರಾದ ಸುನಿಲ್ ರಾಲ್ಫ್ ಮತ್ತು ಸಾರ್ವಜನಿಕ ಸಂಪರ್ಕ ವಿಭಾಗದ ಹಿರಿಯ ಉಪಾಧ್ಯಕ್ಷರಾದ ಸಂಜಯ್ ಹಂಡೂರ್ ಮತ್ತು ಸಿಎಸ್‌ಆರ್ ಆರೋಗ್ಯ ವಿಭಾಗದ ಸಂಯೋಜಕರಾದ ಮುತ್ತು ಕೃಷ್ಣ ಮತ್ತು ಅಧಿಕಾರಿಗಳು ಇದ್ದರು




ಹಂಪಿ ಟೈಮ್ಸ್ HAMPI TIMES

## ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಜರುಗಿದ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಹೈಲೈಟ್ಸ್

ಇಲಾಖೆಯ ಒಟ್ಟಾರೆ ಆಯವ್ಯಯದಲ್ಲಿ ಬಿಡುಗಡೆಯಾದ ಮೊತ್ತ 1884.01 ಕೋಟಿ ರೂ. ನಲ್ಲಿ 1879.35 ಕೋಟಿ ವೆಚ್ಚವಾಗಿದ್ದು, 99.75 % ಸಾಧನೆಯಾಗಿದೆ.

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಡಿ 389 ವಿದ್ಯಾರ್ಥಿ ನಿಲಯಗಳು, ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗಳು ? 39,541 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಒದಗಿಸಿದ್ದು, 194.71 ಕೋಟಿ ರೂ. ಒದಗಿಸಲಾಗಿದೆ. ಎಸ್.ಎಸ್.ಎಲ್.ಸಿ. ಯಲ್ಲಿ ಶೇ. 77 ರಷ್ಟು ಫಲಿತಾಂಶ ಬಂದಿದ್ದು, ಫಲಿತಾಂಶ ಉತ್ತಮ ಪಡಿಸಲು ಸೂಚನೆ ನೀಡಿದರು.

2,90,546 ವಿದ್ಯಾರ್ಥಿಗಳಿಗೆ 50.47 ಕೋಟಿ ರೂ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಪಾವತಿ ಮಾಡಲಾಗಿದೆ. 2,48,887 ವಿದ್ಯಾರ್ಥಿಗಳಿಗೆ 302.64 ಕೋಟಿ ರೂ. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಪಾವತಿ ಮಾಡಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಹಾಸ್ಟೆಲ್‌ಗಳಿಗೆ ಸಂಜೆ ವೇಳೆಗೆ ಭೇಟಿ ನೀಡಿ, ಶುಚಿ ಕಿಟ್‌ಗಳು, ಆಹಾರ ಪದಾರ್ಥ ವಿತರಣೆ ಸಮರ್ಪಕವಾಗಿ ಆಗುತ್ತಿದೆಯೇ ಎಂದು ಪರಿಶೀಲಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಕೆಲವು ಆದಿವಾಸಿ ಬುಡಕಟ್ಟು ವಸತಿ ಶಾಲೆಗಳಲ್ಲಿ ರಾತ್ರಿ ವೇಳೆ ಮಕ್ಕಳು ಇರುವುದಿಲ್ಲ. ಮಕ್ಕಳು ರಾತ್ರಿ ಊಟವಾದ ನಂತರ ಮನೆಗೆ ಕರೆದುಕೊಂಡು ಹೋಗುತ್ತಾರೆ. ಚಿಕ್ಕ ಮಕ್ಕಳು ಎಂದು ಮನೆಗೆ ಕರೆದುಕೊಂಡು ಹೋಗುತ್ತಾರೆ. ಎಲ್ಲ ಸೌಲಭ್ಯ ಇದ್ದೂ, ಯಾಕೆ ಮನೆಗೆ ಕರೆದುಕೊಂಡು ಹೋಗುತ್ತಾರೆ. ಈ ಕುರಿತು ಪರಾಮರ್ಶೆ ನಡೆಸಲು ಸೂಚಿಸಿದರು. ಆದಿವಾಸಿ ಬುಡಕಟ್ಟು ವಸತಿ ಶಾಲೆಗಳ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸೂಚಿಸಿದರು. ಇದಕ್ಕಾಗಿ ಶಿಕ್ಷಕರ ನೇಮಕಕ್ಕೆ ಕ್ರಮ ವಹಿಸಲು ಆರ್ಥಿಕ ಇಲಾಖೆಗೆ ಸೂಚಿಸಿದರು. ಈ ಆದಿವಾಸಿ ಬುಡಕಟ್ಟು ವಸತಿ ಶಾಲೆಯ ಮಕ್ಕಳು ಇತರ ವಿದ್ಯಾರ್ಥಿಗಳೊಂದಿಗೆ ಸಮರ್ಥವಾಗಿ ಸ್ಪರ್ಧಿಸುವಂತಾಗಬೇಕು ಎಂದು ಸೂಚಿಸಿದರು. ಸ್ಮಾರ್ಟ್ ಕ್ಲಾಸ್‌ಗಳ ವ್ಯವಸ್ಥೆ ಸದ್ಬಳಕೆ ಮಾಡುವಂತೆ ಸೂಚಿಸಿದರು. ಅನುದಾನ ಲಭ್ಯವಿದೆ ಎಂಬ ಕಾರಣಕ್ಕೆ ಬೇಡಿಕೆ ಇಲ್ಲದೆ ಇದ್ದರೂ, ಹಾಸಿಗೆ, ಬೆಡ್‌ಶೀಟ್ ಮತ್ತಿತರ ವಸ್ತುಗಳನ್ನು ಅನಗತ್ಯವಾಗಿ ಖರೀದಿಸುವುದನ್ನು ಸಹಿಸಲಾಗದು. ಅನಗತ್ಯವಾಗಿ 4 ಜಿ ವಿನಾಯಿತಿ ಪಡೆಯುವ ಬದಲು ನೇರವಾಗಿ ಟೆಂಡರ್ ಕರೆದು ಖರೀದಿ, ಸೇವೆಗಳನ್ನು ಪಡೆಯಬೇಕೆಂದು ಎಂದು ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ನೀವು ಬಡವರು, ದಲಿತರ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಲು ಆಗದಿದ್ದರೆ ನೀವು ಸೇವೆಯಲ್ಲಿರಲು ನಾಲಾಯಕ್ಕು ಎಂದು ಎಚ್ಚರಿಕೆ ನೀಡಿದರು. ವಸತಿ ಶಾಲೆಗಳು ಬಡ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಬೇಕು. ಕೇವಲ ಬುದ್ಧಿವಂತರನ್ನು ಇನ್ನಷ್ಟು ಬುದ್ಧಿವಂತರಾಗಿಸುವುದು ಮಾತ್ರವಲ್ಲ; ಕಲಿಕೆಯಲ್ಲಿ ಹಿಂದುಳಿದವರನ್ನೂ ಬುದ್ಧಿವಂತರಾಗಿಸಬೇಕು ಎಂದು ತಿಳಿಸಿದರು.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಸಕಾರಾತ್ಮಕ ಚಿಂತನೆಯ ಶಕ್ತಿ.... ನಾರ್ಮನ್ ವಿನ್ಸೆಂಟ್ ಪೀಲೆ



ನಮ್ಮ ಯೋಚನೆಗಳು ಮತ್ತು ನಮ್ಮ ನಂಬುಗೆಗಳು ನಮ್ಮ ಬದುಕಿನ ಮೇಲೆ ನೇರ ಮತ್ತು ಆಳವಾದ ಪ್ರಭಾವವನ್ನು ಬೀರುತ್ತವೆ. ಸಕಾರಾತ್ಮಕ ಆಲೋಚನೆಗಳನ್ನು ನಮ್ಮಲ್ಲಿ ನಾವು ಬೆಳೆಸಿಕೊಳ್ಳುವುದರ ಮೂಲಕ ನಮ್ಮ ಬದುಕನ್ನು ಉತ್ತಮವಾಗಿಸಿಕೊಳ್ಳಬಹುದು.

ಈ ಪುಸ್ತಕದ ರಚನಾಕಾರ ಪೀಲೆ ಪ್ರಾರಂಭದಲ್ಲಿ ಒಂದು ಕಥೆಯನ್ನು ಹೇಳುತ್ತಾನೆ... ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದ ಓರ್ವ ವ್ಯಕ್ತಿ ಬದುಕಿ ಉಳಿಯುವುದು ಕೇವಲ ಆರು ತಿಂಗಳು ಎಂದು ಎಲ್ಲ ವೈದ್ಯರು ಹೇಳಿದ್ದರು. ಆದರೆ ನಂಬಿಕೆ ಕಳೆದುಕೊಳ್ಳದ ಆ ವ್ಯಕ್ತಿ ತಾನು ಕಾಯಿಲೆಯಿಂದ ಗುಣಮುಖನಾಗಿ ಮತ್ತೆ ಆರೋಗ್ಯವನ್ನು ಹೊಂದುವೆ ಎಂಬ ಕಡು ಭರವಸೆಯನ್ನು ಹೊಂದಿದ್ದು, ಮುಂದಿನ ಆರು ತಿಂಗಳುಗಳ ಕಾಲ ತಾನು ಗುಣವಾಗುತ್ತಿರುವಂತೆ ಕಲ್ಪಿಸಿಕೊಳ್ಳತೊಡಗಿದ ಪರಿಣಾಮವಾಗಿ ಆತ ನಿಜವಾಗಿಯೂ ತನ್ನ ಆರೋಗ್ಯದಲ್ಲಿ ಉತ್ತಮಿಕೆಯನ್ನು ಕಂಡುಕೊಂಡನು. ವೈದ್ಯರ ಎಲ್ಲ ನಕಾರಾತ್ಮಕ ಹೇಳಿಕೆಗಳನ್ನು ಸುಳ್ಳೆನಿಸುವಂತೆ ಪವಾಡಸದೃಶವಾಗಿ ಆತ ಗುಣಮುಖನಾಗಿ ಮುಂದೆ ಹಲವಾರು ವರ್ಷಗಳ ಕಾಲ ಜೀವಿಸಿದನು.

ಸಕಾರಾತ್ಮಕ ಚಿಂತನೆಗೆ ಈ ಕಥೆಯು ಒಂದು ಉತ್ತಮ ಉದಾಹರಣೆಯಾಗಿದ್ದು ಪೀಲೆಯ ಪ್ರಕಾರ ನಾವು ಸಕಾರಾತ್ಮಕವಾಗಿ ಚಿಂತಿಸತೊಡಗಿದಾಗ ಸಕಾರಾತ್ಮಕ ಪ್ರಭಾವಲಯವೊಂದು ಸೃಷ್ಟಿಯಾಗಿ ನಮಗಿರುವ ಅಡೆತಡೆಗಳನ್ನು ನಿವಾರಿಸಿ ನಮ್ಮ ಗುರಿಯನ್ನು ತಲುಪಿಸಲು ಸಹಾಯ ಮಾಡುತ್ತದೆ.

ಸಕಾರಾತ್ಮಕ ಚಿಂತನೆಗೆ ಮುಖ್ಯವಾಗಿ ಬೇಕಾಗಿರುವುದು ನಂಬಿಕೆ. ನಮ್ಮಲ್ಲಿ ನಂಬಿಕೆ ಇದ್ದಾಗ ನಾವು ಎಂತಹದೇ ಸಂಕಟದ ಪರಿಸ್ಥಿತಿಯಲ್ಲಿಯೂ ಕೂಡ ನಮಗೆ ಶಕ್ತಿ ಮತ್ತು ಮುನ್ನುಗುವ ಸಾಮರ್ಥ್ಯವನ್ನು ನೀಡುತ್ತದೆ.

ಈ ಪುಸ್ತಕವು ಒಟ್ಟು 13 ಭಾಗಗಳನ್ನು ಹೊಂದಿದ್ದು

* ನಿನ್ನನ್ನು ನೀನು ನಂಬು.... ತನ್ನನ್ನು ತಾನು ನಂಬುವ ಮೂಲಕ ತಮ್ಮ ವಿಶ್ವಾಸವನ್ನು ಹೆಚ್ಚಿಸಿಕೊಂಡ ವ್ಯಕ್ತಿ ಬದುಕಿನಲ್ಲಿ ಏನನ್ನು ಬೇಕಾದರೂ ಸಾಧಿಸಬಲ್ಲ. ಮರದ ಮೇಲಿರುವ ಹಕ್ಕಿ ತನ್ನ ರೆಕ್ಕೆಗಳಲ್ಲಿನ ಹಾರುವ ಶಕ್ತಿಯನ್ನು ನಂಬುತ್ತದೆಯೇ ಹೊರತು ತಾನು ಕುಳಿತಿರುವ ಕೊಂಬೆಯನ್ನಲ್ಲ ಎಂಬುದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬಹುದು.

* ಶಾಂತವಾದ ಮನಸ್ಸು ಶಕ್ತಿಯ ಉತ್ಪಾದಕ ಕೇಂದ್ರ.... ವಿವಿಧ ವಿಚಾರಗಳಿಂದ ತುಂಬಿದ ಮನಸ್ಸು ಭೋರ್ಗರೆಯುವ ಸಮುದ್ರದಂತೆ.ಅಲ್ಲಿ ಯಾವುದೇ ರೀತಿಯ ಶಕ್ತಿ ಸಂಚಯವಾಗುವುದಿಲ್ಲ. ಶಾಂತವಾದ ಮನಸ್ಸಿನಲ್ಲಿ ಅದ್ಭುತ ವಿಚಾರಗಳ ಮಂಥನವಾಗಿ ಶಕ್ತಿಯ ಅವಿರ್ಭಾವವಾಗುತ್ತದೆ.

* ನಿರಂತರವಾಗಿ ಶಕ್ತಿಯನ್ನು ಹೊಂದುವ ಬಗೆ.... ಯಾವ ರೀತಿ ದೇಹಕ್ಕೆ ಆಹಾರವನ್ನು ಒದಗಿಸಿ ಶಕ್ತಿಯನ್ನು ತುಂಬುತ್ತೇವೆಯೋ ಅಂತೆಯೇ ಮನಸ್ಸಿನ ದೌರ್ಬಲ್ಯಗಳನ್ನು ಮೆಟ್ಟಿ ಸಬಲರಾಗಲು ನಮ್ಮ ಮನಸ್ಸಿಗೆ ಉನ್ನತ ವಿಚಾರಗಳ ಸಕಾರಾತ್ಮಕ ಶಕ್ತಿಯನ್ನು ನಿರಂತರವಾಗಿ ತುಂಬಬೇಕು.

*ಪ್ರಾರ್ಥನೆಯ ಶಕ್ತಿ..... ಪ್ರಾರ್ಥನೆ ಒಂದು ರೀತಿಯ ಸಮರ್ಪಣಾ ಭಾವ. ಪ್ರಾರ್ಥನೆಯಲ್ಲಿರುವ ಶಕ್ತಿ ನಮ್ಮ ಮತ್ತು ದೇವರ ಕುರಿತ ನಮ್ಮ ನಂಬಿಕೆ, ಭಕ್ತಿ, ಶ್ರದ್ಧೆ ಮತ್ತು ಅಲೌಕಿಕ ಬಾಂಧವ್ಯ ವನ್ನು ಸೂಚಿಸುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

* ಸ್ವಸಂತೋಷವನ್ನು ಹುಟ್ಟಿಸಿಕೊಳ್ಳುವ ಬಗೆ... ಬೊಜ್ಜು ಬಾಯರಳಿಸುವ ಮಗುವಿನ ಮುಗ್ಧ ನಗೆ, ಸುಂದರವಾಗಿ ಅರಳಿರುವ ಹೂವು, ಪ್ರಕೃತಿಯ ಸ್ನಿಗ್ಧ ಸೌಂದರ್ಯ, ಕುಟುಂಬ ದಲ್ಲಿನ ಪ್ರೀತಿ ಮಮತೆ ಹಾಸ್ಯ ತಮಾಷೆ ನಗು ಹರಟೆ ಮುಂತಾದ ಸಣ್ಣ ಪುಟ್ಟ ಖುಷಿಗಳು ನಮ್ಮ ಸಂತೋಷ ವನ್ನು ಹೆಚ್ಚಿಸುತ್ತವೆ. ಎಲ್ಲರಿಗಾಗಿ ಎಲ್ಲವನ್ನು ಮಾಡುವ ನಾವು ನಮ್ಮ ಸಂತೋಷಕ್ಕಾಗಿಯೂ ಬದುಕಿನ ಕೆಲ ಘಳಿಗೆಗಳನ್ನು ಮೀಸಲಿಟ್ಟುಕೊಳ್ಳಬೇಕು

* ಅತ್ಯುತ್ತಮವಾದನ್ನೇ ಬಯಸುವುದು ಮತ್ತು ಪಡೆಯುವುದು... ಉನ್ನತ ಗುರಿಯಡೆಗೆ ನಮ್ಮ ಧ್ಯೇಯವನ್ನು ಇಟ್ಟುಕೊಂಡು ಅದಕ್ಕಾಗಿ ಸತತ ಪ್ರಯತ್ನ ಪಡುತ್ತಿರಬೇಕು. ಅತ್ಯುತ್ತಮವಾದದ್ದು ಎಂದರೆ ಐಹಿಕ ಸುಖ ಭೋಗಗಳಲ್ಲ ಎಂಬುದರ ಸ್ಪಷ್ಟ ಅರಿವನ್ನು ಹೊಂದಿ ಉನ್ನತ ವಿದ್ಯಾಭ್ಯಾಸ, ಒಳ್ಳೆಯ ನೌಕರಿ, ಗುರು ಹಿರಿಯರ ಆಶೀರ್ವಾದ, ಒಳ್ಳೆಯ ಸಾಂಗತ್ಯ, ಒಳ್ಳೆಯ ಗೆಳೆಯರು ಇವೆಲ್ಲ ಅತ್ಯುನ್ನತ ಬದುಕಿನ ಸಂಕೇತಗಳು

* ಸೋಲನ್ನು ನಂಬದಿರುವುದು... ಸೋಲು ನಾವು ಪ್ರಯತ್ನ ಪಟ್ಟದಕ್ಕೆ ಸಿಕ್ಕ ಫಲ ಎಂದು ಅರಿತು ನಿರಾಶರಾಗದೆ,ಇಂದಿನ ಸೋಲು ನಾಳೆಯ ಗೆಲುವಿಗೆ ಮೆಟ್ಟಿಲಾಗಬಹುದು ಎಂಬ ನಂಬಿಕೆಯಿಂದ ಕಾರ್ಯನಿರ್ವಹಿಸುತ್ತಾ ಪ್ರತಿಯೊಂದು ಸಣ್ಣ ಯಶಸ್ಸಿಗೂ ಸಂಭ್ರಮಿಸುತ್ತಾ ಸೋಲನ್ನು ಸೋಲಿಸುತ್ತಲೇ ಹೋಗಬೇಕು.

* ಚಿಂತಿಸುವ ಚಟವನ್ನು ಬಿಡುವುದು ಹೇಗೆ.... ಚಿಂತೆಗು ಚಿತೆಗೂ ಇರುವುದು ಸೊನ್ನೆಯಷ್ಟೇ ವ್ಯತ್ಯಾಸ.... ಚಿತೆ ಸತ್ತ ವ್ಯಕ್ತಿಯನ್ನು ಸುಟ್ಟರೆ ಚಿಂತೆ ಜೀವಂತ ವ್ಯಕ್ತಿಯನ್ನು ದಹಿಸುತ್ತದೆ. ಬದುಕಿನಲ್ಲಿ ಬಂದೆರಗುವ ಸೋಲು ನಿರಾಶೆ ಅಪಮಾನಗಳಿಗೆ ಚಿಂತಿಸುತ್ತಾ ಕೂಡುವುದರ ಬದಲು ಪರಿಹಾರ ಮಾರ್ಗಗಳನ್ನು ಹುಡುಕುವುದು ಮತ್ತು ಸವಾಲುಗಳನ್ನು ಮತ್ತು ತೊಂದರೆಗಳನ್ನು ಎದುರಿಸುವುದು ಜಾಣ್ಮೆಯ ಲಕ್ಷಣ.

* ವೈಯಕ್ತಿಕ ತೊಂದರೆಗಳನ್ನು ನಿವಾರಿಸಿಕೊಳ್ಳುವ ಶಕ್ತಿ.... ಅನಿಶ್ಚಿತವಾದ ಬದುಕಿನಲ್ಲಿ ಬರುವ ತೊಂದರೆಗಳು ಕತ್ತಲೆ ಬೆಳಕಿನ ಕಣ್ಣ ಮುಚ್ಚಾಲೆ ಆಟವಿದ್ದಂತೆ... ಪ್ರತಿಯೊಂದು ಕಷ್ಟದ ಗಳಿಗೆಯೂ ಜಾರಿ ಹೋಗುತ್ತದೆ ಪ್ರತಿಯೊಂದು ಸುಖದ ಗಳಿಗೆಯು ಮರೆತು ಹೋಗುತ್ತದೆ... ಆದ್ದರಿಂದ ಬದುಕಿನಲ್ಲಿ ಬರುವ ಎಲ್ಲ ತೊಂದರೆಗಳನ್ನು ಜಾಣ್ಮೆಯಿಂದ ನಿವಾರಿಸಿಕೊಳ್ಳುವುದು, ಎದುರಿಸುವುದು ಬಹಳ ಮುಖ್ಯ.

* ಚೈತನ್ಯ ಉಡುಗಿದಂತೆ ತೋರಿದಾಗ ಈ ಆರೋಗ್ಯ ಸೂತ್ರಗಳನ್ನು ಅಳವಡಿಸಿಕೊಳ್ಳಿ... ಬದುಕೆಂಬ ಹಾವು ಏಣಿಯ ಆಟದಲ್ಲಿ ಕೆಲವೊಮ್ಮೆ ದೈಹಿಕವಾಗಿ, ಮಾನಸಿಕವಾಗಿ ದಣಿವಾಗುವುದು ಆರೋಗ್ಯ ಕುಂದುವುದು ಸಹಜ. ಆದ್ದರಿಂದ ನಮ್ಮ ಮನೋ ದೈಹಿಕ ಆರೋಗ್ಯವನ್ನು ಸದಾ ಕಾಯ್ದಿಟ್ಟುಕೊಳ್ಳುವ ನಿಟ್ಟಿನಲ್ಲಿ ಉತ್ತಮ ಹವ್ಯಾಸಗಳನ್ನು ಹೊಂದಬೇಕು. ವ್ಯಾಯಾಮ, ವೇಗದ ನಡಿಗೆ, ನೃತ್ಯ ಮುಂತಾದವುಗಳು ದೈಹಿಕ ಆರೋಗ್ಯವನ್ನು ಕಾಪಾಡಿದರೆ ಧ್ಯಾನ, ಪ್ರಾಣಾಯಾಮ, ಭಜನೆ, ಪ್ರಾರ್ಥನೆ,ಸಂಗೀತ ಮುಂತಾದವುಗಳು ಮಾನಸಿಕ ನೆಮ್ಮದಿಯನ್ನು ಕಾಯ್ದುಕೊಳ್ಳಲು ಸಹಕರಿಸುತ್ತವೆ. ಇದರ ಜೊತೆಜೊತೆಗೆ ಪ್ರಕೃತಿಯೊಂದಿಗಿನ ಒಡನಾಟ, ಉತ್ತಮ ಕೌಟುಂಬಿಕ ಬಾಂಧವ್ಯ, ಒಳ್ಳೆಯ ಸ್ನೇಹಿತರು ಮತ್ತುಉತ್ತಮಹವ್ಯಾಸಗಳುಬದುಕನ್ನುಚೇತೋಹಾರಿಯಾಗಿಸುತ್ತವೆ.

* ಜನರು ನಿಮ್ಮನ್ನು ಇಷ್ಟಪಡುವಂತೆ ಮಾಡುವುದು ಹೇಗೆ.... ನಮ್ಮ ಸ್ನೇಹಪರ ನಡವಳಿಕೆ ಒಳ್ಳೆಯ ನಡತೆ ಉತ್ತಮ ಹವ್ಯಾಸಗಳು ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡುವ ನಿರ್ವ್ಯಾಜ್ಯ ನಿಷ್ಪಕ್ಷಪಾತವಾದ ಮನಸ್ಥಿತಿ ಜನರು ನಮ್ಮನ್ನು ಇಷ್ಟಪಡುವಂತೆ ಮಾಡುತ್ತದೆ. ಪ್ರಯತ್ನಪೂರ್ವಕವಾಗಿ ಒಳ್ಳೆಯದನ್ನು ನಮ್ಮಲ್ಲಿ ನಾವು ಅಳವಡಿಸಿಕೊಳ್ಳುತ್ತಾ ಸಾಗಬೇಕು.

* ಹೃದಯದ ನೋವಿಗೆ ಔಷಧಿ.... ಬದುಕಿನ ಎಲ್ಲಾ ದಿನಗಳು ನಮ್ಮ ಇಚ್ಛೆಯಂತೆ ಜರುಗುವುದಿಲ್ಲ. ಬದುಕಿನಲ್ಲಿ ಸೋಲು, ನಿರಾಶೆ, ಅವಮಾನಗಳು ನಮ್ಮನ್ನು ಒಂದಲ್ಲ ಒಂದು ಸಂದರ್ಭದಲ್ಲಿ ಕಾಡುತ್ತಲೇ ಹೋಗುತ್ತವೆ. ಅಂತಹ ಸಮಯದಲ್ಲಿ ಧೃತಿಗೆಡದೆ ಈ ಸಮಯ ಕಳೆದು ಹೋಗುತ್ತದೆ ಎಂಬಂತೆ ಹಲ್ಲು ಕಚ್ಚಿ ಆ ಎಲ್ಲ ತೊಂದರೆಗಳನ್ನು ಸಹಿಸಿಕೊಳ್ಳಬೇಕು... ಸಾಧ್ಯವಾದರೆ ಅವುಗಳಿಂದ ಹೊರಬರುವ ಪ್ರಯತ್ನವನ್ನು ಮಾಡಬೇಕು. ಗಾಡಾಂಧಕಾರದಲ್ಲಿರುವವನಿಗೆ ಬೆಳಕಿನ ಅವಶ್ಯಕತೆಯಂತೆ, ಕಡು ಹಸಿವಿನಿಂದ ಬಳಲುತ್ತಿರುವವನಿಗೆ ಹಿಡಿ ಅನ್ನ ಸಿಕ್ಕಂತೆ, ನಿರಾಶೆಯ ಕೋಪದಲ್ಲಿರುವವನಿಗೆ ನಂಬಿಕೆಯ ಏಣಿ ದೊರೆತು ಬದುಕಿನ ಈ ಎಲ್ಲ ಸಂದರ್ಭಗಳು ಸಾಮಾನ್ಯ ಮತ್ತು ಸಹಜವಾದವು ಎಂಬಂತೆ ನಿರ್ಲಿಪ್ತ ಭಾವದಿಂದ ಸ್ವೀಕರಿಸಬೇಕು.

* ಜಗತ್ತಿನ ಅತ್ಯುನ್ನತ ಶಕ್ತಿಯನ್ನು ಹೇಗೆ ಸೆಳೆದು ಕೊಳ್ಳುವುದು... ನಕಾರಾತ್ಮಕ ಚಿಂತನೆಗಳು ನಮ್ಮನ್ನು ಸೆಳೆದಷ್ಟು ಬೇರಾವುದೂ ಸೆಳೆಯಲಾರದು. ಬದುಕಿನಲ್ಲಿ ಸಕಾರಾತ್ಮಕ ಚಿಂತನೆಗಳನ್ನು, ಕ್ರಿಯೆಗಳನ್ನು ಪಟ್ಟು ಬಿಡದೆ ಆಲಂಗಿಸಿಕೊಂಡು ದೈನಂದಿನ ಬದುಕಿನ ಭಾವವನ್ನಾಗಿಸಿಕೊಳ್ಳಬೇಕು. ಸಕಾರಾತ್ಮಕ ಚಿಂತನೆಗಳು ಒಮ್ಮೆ ಅಳವಡಿಸಲ್ಪಟ್ಟರೆ ಬದುಕಿನ ಯಾವುದೇ ಹಂತದಲ್ಲಿಯೂ ಕೂಡ ಮನುಷ್ಯ ತಪ್ಪು ದಾರಿಯೆಡೆ ಜಾರಲಾರ.

ನಾರ್ಮನ್ ವಿನ್ಸೆಂಟ್ ಪೀಲೆ ಬರೆದಿರುವ " ದ ಪವರ್ ಆಫ್ ಪಾಸಿಟಿವ್ ಥಿಂಕಿಂಗ್ " ಎಂಬ ಕೃತಿ ಸಕಾರಾತ್ಮಕ ಶಕ್ತಿಯ ಕುರಿತಾದ ಜಗತ್ತಿನ ಶ್ರೇಷ್ಠ ಪುಸ್ತಕಗಳಲ್ಲಿ ಒಂದಾಗಿದೆ. ಅದರ ಭಾವಾನುವಾದ ಇಗೋ ನಿಮ್ಮ ಓದಿಗೆ.

### ಕೆಕೆಆರ್‌ಡಿಬಿಯ ವಿವಿಧ ಕಾಮಗಾರಿಗಳ ಭೂಸ್ವಾಧೀನಕ್ಕೆ ಮಹತ್ವದ ನಿರ್ಣಯದ ಸಭೆಯಲ್ಲಿ ಶಾಸಕ ಬಸವರಾಜ ರಾಯರೆಡ್ಡಿ ಸೂಚನೆ

# ಹಣವಿದೆ ಕಟ್ಟಡ ನಿರ್ಮಾಣಕ್ಕೆ ಭೂಮಿ ಖರೀದಿಸಿ

■ **ಹಂಪಿ ಟೈಮ್ಸ್ ಕೊಪ್ಪಳ**

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಮತ್ತು ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಅವರು ಜೂನ್ 18ರಂದು ಕೆಕೆಆರ್‌ಡಿಬಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದರು.

ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ರಾಹುಲ್ ಪಾಂಡೆಯ, ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರ ಸಮ್ಮುಖದಲ್ಲಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಕಾರ್ಯನಿರ್ವಾಹಕ ಎಂಜಿನಿಯರ್ ಮತ್ತು ವಿವಿಧ ವಿಶ್ವ ವಿದ್ಯಾಲಯಗಳ ಕುಲ ಸಚಿವರು ಮತ್ತು ಜಿಲ್ಲಾ ನ್ಯಾಯಾಲಯ ಇಲಾಖೆ ಹಾಗೂ ಕೌಶಲ ಅಭಿವೃದ್ಧಿ ಕೇಂದ್ರ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಕೆಕೆಆರ್‌ಡಿಬಿ ಕಾಮಗಾರಿಗಳ ಪ್ರಗತಿಗೆ ಸಂಬಂಧಿಸಿದಂತೆ ಸುಧೀರ್ಘ ಎರಡು ಗಂಟೆಗು ಹೆಚ್ಚು ಕಾಲ ಚರ್ಚಿಸಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ



ನಾನಾ ಕಾಮಗಾರಿಗಳಿಗೆ ಅವಶ್ಯವಿರುವ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಕೆಲವು ಮಹತ್ವದ ನಿರ್ಣಯಗನ್ನು ಕೈಗೊಳ್ಳಲಾಯಿತು.

ಸಭೆಯಲ್ಲಿ, ಕೊಪ್ಪಳ ಜಿಲ್ಲೆಗೆ ಮಂಜೂರಾದ ಶಾಲೆಗಳು, ಕಾಲೇಜುಗಳು ಮತ್ತು ವಸತಿ ಶಾಲೆಗಳಿಗೆ ವಿವಿಧೆಡೆ ಜಮೀನು ಗುರುತಿಸಿ ನಿರ್ಣಯಿಸಲಾಯಿತು. ಈಗಾಗಲೇ ನಿವೇಶನ ಇರುವ ಕಡೆ ಅನುದಾನ ಬಿಡುಗಡೆ ಮಾಡಲು ಮತ್ತು ಈಗಾಗಲೇ ಬಿಡುಗಡೆಯಾದ ಅನುದಾನ ಬಳಕೆಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ನಡೆಸಲು ಸಭೆಯಲ್ಲಿ ಅನುಮೋದನೆ ನೀಡಲಾಯಿತು. ವಿಶೇಷವಾಗಿ ಕೊಪ್ಪಳ ವಿಶ್ವ ವಿದ್ಯಾಲಯ ನಿರ್ಮಾಣ, ಜಿಲ್ಲಾ ನ್ಯಾಯಾಲಯ ನಿರ್ಮಾಣ, ಕೌಶಲ ಅಭಿವೃದ್ಧಿ ಕೇಂದ್ರ ನಿರ್ಮಾಣ ಸೇರಿದಂತೆ ಮಹತ್ವದ ಕಟ್ಟಡ ನಿರ್ಮಾಣಗಳಿಗೆ ಅವಶ್ಯವಿರುವಷ್ಟು ಜಮೀನು ನೀಡುವುದರ ಬಗ್ಗೆ ಸಹ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಯಿತು. ಕುಕನೂರ, ಕಾರಟಗಿ ಮತ್ತು ಕನಕಗಿರಿಯಲ್ಲಿ ತಾಲೂಕು ಆಸ್ಪತ್ರೆ ನಿರ್ಮಾಣದ ಬಗ್ಗೆ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಯಿತು.

ಈ ವೇಳೆ ಮಾತನಾಡಿದ ರಾಯರೆಡ್ಡಿ ಅವರು, ಅನುದಾನ ಬಿಡುಗಡೆಯಾಗಿದೆ ಆದರೆ ಕಾಮಗಾರಿಯನ್ನು ಆರಂಭಿಸಲು ಜಮೀನು ಸಿಗುತ್ತಿಲ್ಲ ಎಂದು ಬಹುತೇಕ ಇಲಾಖೆಗಳ ಅಧಿಕಾರಿಗಳು ಹೇಳುತ್ತಾರೆ. ಜಮೀನು ಖರೀದಿ ಮಾಡಲು ಯಾವುದೇ ರೀತಿಯ ಹಣಕಾಸಿನ ಕೊರತೆ ಇಲ್ಲ. ಜಮೀನು ಸಿಗುತ್ತಿಲ್ಲ ಎಂದು ಅಧಿಕಾರಿಗಳು ಸುಮ್ಮನೆ ಕೂಡಬಾರದು. ಜಮೀನು ಖರೀದಿಗೆಂದೇ ಕೆಕೆಆರ್‌ಡಿಬಿನಲ್ಲಿ ಹಣ ಇದೆ. ಜಮೀನು ಖರೀದಿ ಪ್ರಕ್ರಿಯೆ ನಡೆಸಲು ಅಧಿಕಾರಿಗಳು ಮುಂದೆ ಬಂದಲ್ಲಿ ಕೆಕೆಆರ್‌ಡಿಬಿಯಿಂದ ಅನುದಾನ ಸಿಗುತ್ತದೆ ಎಂದು ತಿಳಿಸಿದರು.

ಯಲಬುರ್ಗಾ ಸೇರಿದಂತೆ ಜಿಲ್ಲೆಯ ವಿವಿಧೆಡೆ ಮಂಜೂರಾದ ಶಾಲೆಗಳಿಗೆ ಜಮೀನು ಲಭ್ಯತೆ, ಜಮೀನಿನ ಬೇಡಿಕೆಯ ಬಗ್ಗೆ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಂದ ಮಾಹಿತಿ ಪಡೆದರು. ನಮ್ಮ ಜಿಲ್ಲೆಗೆ ಮಂಜೂರಾದ ಶಾಲೆಗಳಿಗೆ ಅನುದಾನ ನೀಡಲಾಗಿದೆ. ಆದ್ದರಿಂದ >>4

## ಕವಿ ಮನಸು

### ಪತ್ರೊಡೆ



ಮಳೆಯ ನೀರಿಗೆ ಸೊಂಪಾಗಿ
ಬೆಳೆಯಿತು ಕೆಸುವು
ಎಲೆಯ ಕಂಡೊಡನೆ ನೆನಪಾದವು
ಅಡುಗೆಗಳು ಹಲವು
ಪತ್ರೊಡೆಯ ಮೇಲೆ ಒಲವು
ಸರಿಯಾಗಿ ಮಾಡಲು ಗೆಲುವು

ಬೇಳೆ ಕಾಳುಗಳ ಅರೆದು
ಎಲೆಯ ಮೇಲೆ ಹಚ್ಚಿ
ಮಡಸಿ ಉಗಿಯಲ್ಲಿ
ಅಟ್ಟಿನೊಳಗಿಟ್ಟು ಮುಚ್ಚಿ
ಕೆಲ ಸಮಯದಲ್ಲೆ ತಯಾರಾಗುವುದು
ಪತ್ರೊಡೆ ತಿನ್ನಲು ಇಲ್ಲ ಯಾವುದೆ ಅಡೆ
ತಡೆ.

**– ಸುವರ್ಣಾ ಭಟ್ಟ.**

### ಎಂದಿಗೆ ಉದ್ದಾರ...?



ಧರಿಸಿದ ಅಂಗಿಯು ಹೆಸರಿಗೆ ಮಾತ್ರವೆ
ಹರಿದಿದೆ ಎಲ್ಲೆಡೆ ತೂತುಗಳು
ಮರೆಸುವ ಯೋಚನೆ ಬಾರದು ಮನದಲಿ
ತೆರೆದಿದೆ ಬಡವನ ನೋವುಗಳು

ಬದಲಿಸಲೆಲ್ಲಿದೆ ಬೇರೆಯ ಉಡುಪದು
ಇದುವೇ ಇರುವುದು ಬಡವನಲಿ
ಕದಿಯುವ ಚಿಂತನೆ ಮನದಲಿ ಬಾರದು
ಬದುಕಲು ದುಡಿಮೆಯ ಹಾದಿಯಲಿ

ಹೆಗಲನು ಏರಿದೆ ಮಡಿಲಿನ ಕಂದನು
ಮಗುವಿಗೆ ಧರಿಸಲು ಉಡುಪಿಲ್ಲ
ಸಿಗುವುದೆ ಉತ್ತಮ ಬದುಕಿನ ಭಾಗ್ಯವು
ಹಗುರದ ನುಡಿಗಳು ಸರಿಯಲ್ಲ॥

**– ಪೆರ್ಮುಖ ಸುಬ್ರಹ್ಮಣ್ಯ ಭಟ್**

### ಅಯ್ಯೋ ಗಂಡೆ



ಅಯ್ಯೋ ಗಂಡೆ,
ಬಾಲ್ಯವೇ ನಿನಗೆ ಅಂದ
ಗಂಡೆಂದು ಎಲ್ಲರೂ ಮುದ್ದಿಸುವರೆ
ಪ್ರಾಯಕ್ಕೆ ಬಂದಾಗ
ಓರೆ ನೋಟದ ಕಣ್ಣಿಗೆ ಬೀಳುವೆ
ಬರೀ ಓರೆ ನೋಟ ಅಲ್ಲ ಗಂಡೇ
ಆ ನೋಟದಲಿ ಏಳು ಬಣ್ಣಗಳಿವೆ
ನೋಟದ ಬಣ್ಣಕ್ಕೆ ಮರುಳಾಗುವಿ
ಬಯಕೆ ಕವಲೊಡೆದು ಚಿಗುರುವಾಸೆ
ಹತ್ತಾರು ವರ್ಷ ಹರ್ಷದಾಯಕ
ಮಕ್ಕಳು ಮರಿ ಜಂಜಾಟ ಪಟ ಪಟ
ಹೆಂಡತಿ ಈಗಲೂ ಓರೆ ಕಣ್ಣು ಬಿಡುವಳು
ಈಗ ಕಣ್ಣಿಂದ ಬೆಂಕಿ ಉಗಿದ ಭಾಸ
ಹೆಂಡತಿ ಮಕ್ಕಳು ಒಂದು ಕಡೆ
ಓ ಗಂಡೆ ನೀನೊಂದು ಕಡೆ
ಗಂಡೆ ನೀನೇಷ್ಟು ಭಾರ ಹೊತ್ತರೂ,
ಅತ್ತರೂ
ಹೆಂಡತಿ ಮಕ್ಕಳು ಕನಿಕರಿಸಲಾರರು
ಮಕ್ಕಳೋ ಅಧುನಿಕ ವೀರರು
ನೀ ತಿಂದರೂ ಉಪವಾಸವಿದ್ದರೂ ಕೇಳರು
ಈಗ ಗಂಡೇ ಸಂಸಾರ ಸಸಾರವಾಯ್ತು
ಗಂಡೇ ನಿನಗೂ ವಯಸ್ಸಾಯ್ತು
ಬಾನೆತ್ತರಕೆ ಮುಖ ನೋಡುವಂತಾಯ್ತು!

**–ಚಂದ್ರಶೇಖರಯ್ಯ ರೋಣದಮಠ.**

# ಗೋರ್ ಮಾಟಿ
# ಇದು ಬಂಜಾರ ಸಂಸ್ಕೃತಿಯ ಚರಿತ್ರೆ



ಶಿವಮೊಗ್ಗ ನಗರದ ಕುವೆಂಪು ರಂಗಮಂದಿರದಲ್ಲಿ ಭಾನುವಾರ ಸಂಜೆ ಶಿವಮೊಗ್ಗದ ನೇಟಿವ್ ಥಿಯೇಟರ್ ಸಂಸ್ಥೆ ಹಾಗೂ ಮೈಸೂರು ರಂಗಾಯಣ ರೆಪರ್ಟರಿ ಪ್ರಯೋಗಿಸಿದ ನಾಟಕವೇ 'ಗೋರ್ ಮಾಟಿ', ಇದು ಬರೀ ನಾಟಕವಾಗಿರದೇ ಬಂಜಾರರ ಐತಿಹಾಸಿಕ ಹಿನ್ನೆಲೆ, ಕಲೆ, ಸಂಸ್ಕೃತಿ, ಉಡುಗೆ–ತೊಡುಗೆ, ಆಚರಣೆ, ಸಂಪ್ರದಾಯ, ಆಚಾರ–ವಿಚಾರ, ಬದುಕು–ಭವಣೆಗಳ ಸಂಕಥನವಾಗಿರುವುದು ವಿಶೇಷ.

ಸಿ.ಬಸವಲಿಂಗಯ್ಯನವರ ಪರಿಕಲ್ಪನೆ, ಸಂಗೀತ, ನಿರ್ದೇಶನದೊಂದಿಗೆ, ಡಾ.ಶಿರಗಾನಹಳ್ಳಿ ಶಾಂತನಾಯಕ್ ರವರ ನಾಟಕ/ರಂಗರೂಪದೊಂದಿಗೆ, ನಂದಿನಿ.ಕೆ.ಆರ್ ರವರ ಸಹ ನಿರ್ದೇಶನ ಮತ್ತು ರಂಗಪಠ್ಯದೊಂದಿಗೆ, ಗೀತಾ ಮೋಂಟಡ್ಕರವರ ರಂಗ ನಿರ್ವಹಣೆಯೊಂದಿಗೆ ನಾಟಕವು ಬಲು ಸೊಗಸಾಗಿ ಮೂಡಿ ಬಂದಿತು. ಈ ನಾಟಕದಲ್ಲಿ ಶಾಂತನಾಯಕ್ ರವರ 'ಗೋರ್ ಮಾಟಿ' ಕಾದಂಬರಿಯ ಕೆಲವು ಅಧ್ಯಾಯಗಳನ್ನು ಹಾಗೂ ಬಿ.ಟಿ.ಲಲಿತಾನಾಯಕ್ ರವರ 'ತಾಂಡಾಯಣ' ಮತ್ತು 'ಹಬ್ಬ ಮತ್ತು ಬಲಿ' ಸಣ್ಣ ಕಥೆಗಳ ಜೊತೆಗೆ ಚರಿತ್ರೆಯಲ್ಲಿ ಮುಖ್ಯವಾಗಿರುವ ಲಕ್ಕಿಸಾ ಬಂಜಾರ ಹಾಗೂ ವಸಾಹತುಶಾಹಿಯಡಿಯಲ್ಲಿ ಬಂಜಾರರ ದಮನಿತ ಸಂಕಥನಗಳನ್ನು ಹಾಗೂ ಸಂತ ಸೇವಾಲಾಲರ ಧರ್ಮ ಬೋಧನೆಯ ಅಂಶಗಳನ್ನು ಬೆಸೆಯಲಾಗಿದೆ.

'ಗೋರ್ ಮಾಟಿ' ಎಂದರೆ ನಮ್ಮವರು ಎನ್ನುವ ಒಳಗೊಳ್ಳುವಿಕೆಯ ಅರ್ಥದ ಹಿನ್ನೆಲೆಯಲ್ಲಿ ಬಳಸಲಾಗಿದ್ದು, ಸುಮಾರು 2 ಗಂಟೆ 15 ನಿಮಿಷಗಳ ಈ ನಾಟಕವು ಕೃಷ್ಣನ ಗೊಲ್ಲ ಕಥೆಯಿಂದ ಹಿಡಿದು ಇಂದಿನ ಪ್ರಸ್ತುತ ದಿನಮಾನಗಳಲ್ಲಿ ಅಕ್ಷರಸ್ಥ ಬಂಜಾರರ ಬದುಕಿನವರೆಗೂ ಪ್ರೇಕ್ಷಕರನ್ನು ಎಲ್ಲಿಯೂ ಅಲುಗಾಡದಂತೆ ಹಿಡಿದಿಟ್ಟುಬಿಡುತ್ತದೆ. ದೇಶಾದ್ಯಂತ ಹಲವು ರಾಜ್ಯಗಳಲ್ಲಿ ಹರಡಿಕೊಂಡಿರುವ ಬಂಜಾರ ಅಲೆಮಾರಿ ಬುಡಕಟ್ಟು ಸಮುದಾಯವು ಹೇಗೆ ಅನೇಕ ಶತಮಾನಗಳ ಹೋರಾಟದಿಂದ ತಮ್ಮ ನೆಲೆಯನ್ನು ಕಂಡುಕೊಳ್ಳಲು ಹೆಣಗಾಡಿತು ಎಂಬುವ ದೃಶ್ಯರೂಪ ಈ ಸಂಕಥನದಲ್ಲಿ ಕಣ್ಣಿಗೆ ಕಟ್ಟುವಂತೆ ತೋರಿಸಿದ್ದಾರೆ.

"ಜನನ ಮರಣಗಳ ವೃತ್ತಾಕಾರ" ಎಂಬ ಹಾಡಿನಿಂದ ಪ್ರಾರಂಭವಾಗುವ ಈ ನಾಟಕವು ಚಾರ್ಲಿ ಚಾಪ್ಲಿನ್ ನಂತಹ ಮೇರು ನಟರೂ ಸಹ ಬಂಜಾರ ಸಮುದಾಯದವರೇ ಎಂದು ತೋರಿಸುತ್ತದೆ. ಹಾಡಿನ ನಂತರ ಕೃಷ್ಣನ ಗೊಲ್ಲ ಕಥೆಯಲ್ಲಿ ಒಂದು ಅದ್ಭುತವಾದ ಡೈಲಾಗ್ ಬರುತ್ತೆ. "ಜಗದೋದ್ಧಾರದ ಕಾಯಕದಲ್ಲಿ ಜನಾಂಗಗಳು ಜಾತಿಗಳಾಗದೇ ಜಗದ ಜ್ಯೋತಿಗಳಾಗಲಿ....." ಎಂದು. ಭವಿಷ್ಯಃ ಈ ಕೃಷ್ಣ ವಾಣಿಯು ಪ್ರಪಂಚದ ಎಲ್ಲಾ ಜಾತಿ–ಜನಾಂಗಗಳಿಗೂ, ಇಡೀ ಮಾನವ ಕುಲಕ್ಕೂ ಎಂದೆಂದಿಗೂ ಅನ್ವಯವಾಗುವ ವಾಣಿ.

ತದನಂತರ ಲಕ್ಕಿಸಾ ಬಂಜಾರರ ಇತಿಹಾಸ ಹಾಗೂ ಸಿಕ್ಕರ ಇತಿಹಾಸವನ್ನೂ ಈ ರಂಗರೂಪಕದಲ್ಲಿ ಹಾಡು ಹಾಗೂ ನೃತ್ಯಗಳ ಮೂಲಕ, ವಿಶೇಷವಾಗಿ ಪರದೆಯ ಮೇಲೆ ಗೊಂಬೆಗಳ ನೆರಳಿನ ಆಟದೊಂದಿಗೆ ತೋರಿಸಿರುವುದು ಅತ್ಯಂತ ಕ್ರಿಯಾತ್ಮಕ ಸಂಗತಿಯಾಗಿದೆ. ತದನಂತರ ನಿಧಾನವಾಗಿ ಬಂಜಾರರ ಮಕ್ಕಳು ಶಾಲೆಗೆ ಹೋಗಿ ಅಕ್ಷರಭ್ಯಾಸ ನಡೆಸುವ ಸಂದರ್ಭದಲ್ಲಿ ವಿದ್ಯಾಭ್ಯಾಸವನ್ನು ನಡೆಸಬಾರದು ಎಂದು ತಾಂಡಾದ ನಾಯಕರು ಬಂದೂಕಿನಿಂದ ಹೆದರಿಸಿ ಬಂಜಾರ ಸಮುದಾಯವು ಶಿಕ್ಷಣದಿಂದ ವಂಚಿತರಾಗುವಂತೆ ಮಾಡಲಾಗುವ ಇತಿಹಾಸದ ಹಿನ್ನೆಲೆ ಹಾಗೂ ಇದರ ತತ್ಪರಿಣಾಮವಾಗಿ ಬಂಜಾರರ ಮೇಲೆ ಬ್ರಿಟಿಷರ ದಬ್ಬಾಳಿಕೆ, ಬ್ರಿಟಿಷ್ ಸರ್ಕಾರದ ಕಂದಾಯ ಇಲಾಖೆಯಿಂದ ಬರುವ ಪತ್ರ, ಅಕ್ಷರ ಜ್ಞಾನವಿಲ್ಲದೆ ಅದನ್ನು ಓದಲೂ ಆಗದೇ ಹೆಣಗಾಡುವ ಬಂಜಾರರ ಪರಿಸ್ಥಿತಿ, ತಾಂಡಾದಲ್ಲಿರುವ ಅಕ್ಷರಸ್ಥ ತುಳಸಿರಾಮನ ಸಹಾಯ ಪಡೆದು ಪತ್ರದಲ್ಲಿ ಬಂಜಾರ ಸಮುದಾಯ ಬದುಕುತ್ತಿರುವ ನೂರು ಎಕರೆ ಭೂಮಿಯೂ ಸರ್ಕಾರದ ವಶವಾಗಿರುವ ಆಘಾತಕಾರಿ ಸಂಗತಿ, ಮತ್ತೆ ಬಂಜಾರರು ನೆಲೆಯಿಲ್ಲದೆ ಹೆಣಗಾಡುವ ರೀತಿ ಈ ಎಲ್ಲಾ ದೃಶ್ಯ ರೂಪಕಗಳನ್ನು ನಾಟಕದಲ್ಲಿ ನೋಡುವಾಗ ಅನಿಸಿದ್ದು, "ಇಷ್ಟೆಲ್ಲಾ ಬವಣೆಗಳನ್ನು ಅನುಭವಿಸಿದ ಬಂಜಾರ ಸಂಸ್ಕೃತಿಯನ್ನು ಅದು ಹೇಗೆ ಇತಿಹಾಸ ಮರೆತುಬಿಟ್ಟಿದೆ" ಎಂದು.

ಇದರ ನಂತರ ಬಂಜಾರರ ಅತಿ ಮುಖ್ಯವಾದ ಐತಿಹಾಸಿಕ ಚರಿತ್ರೆಯಾದ ಸಂತ ಸೇವಾಲಾಲರ ಚರಿತ್ರೆ ಹಾಗೂ ಬಂಜಾರರ ರಕ್ಷಣೆಗಾಗಿ ಸಂತ ಸೇವಾಲಾಲರು ಆಜನ್ಮ ಬ್ರಹ್ಮಚಾರಿಯಾದ ಕಥೆಯನ್ನು ನೃತ್ಯ–ಲಾವಣಿಗಳಲ್ಲಿ ತೋರಿಸಿರುವುದಂತೂ ಬಲು ರೋಚಕವಾಗಿದೆ. ಆಹಾರ ಪದಾರ್ಥ, ಧವಸ–ಧಾನ್ಯ, ಅಕ್ಕಿ, ಉಪ್ಪು, ಯುದ್ಧ ಸಾಮಗ್ರಿಗಳನ್ನು ಸಾಗಿಸುವ ವ್ಯಾಪಾರಿ ಪ್ರವೃತ್ತಿಯುಳ್ಳ ಬಂಜಾರರು ಎಲ್ಲಿ ಸಿಗುತ್ತದೆಯೋ ಅಲ್ಲಿಯೇ ತಮ್ಮ ತಾಂಡಾಗಳನ್ನು ಹೂಡುತ್ತಿದ್ದರು. ಕಾಲಕ್ರಮೇಣ ವಿದ್ಯಾಭ್ಯಾಸವನ್ನು ಪಡೆದು ಅಕ್ಷರಾಭ್ಯಾಸವನ್ನು ಕಲಿತ ಬಂಜಾರರು ತಮ್ಮ ಸ್ವಂತ ತಾಂಡಾಗಳನ್ನು ಪಡೆದು ಕೃಷಿ–ಪಶುಸಂಗೋಪನೆ ಪ್ರಾರಂಭಿಸಿದರು. ಆದರೂ ಭೂ ಮಾಲೀಕರು, ಆಳುವ ವರ್ಗ, ಗೂಂಡಾಗಳು, ಬ್ರಿಟಿಷ್ ಸರ್ಕಾರ ಕೊಡುವ ಕಿರುಕುಳ, ದಬ್ಬಾಳಿಕೆಗಳಿಂದ ಸಮಾಜದಲ್ಲಿ ಜೀತದಾಳು ಪದ್ಧತಿಯ ಭೀಕರತೆಯನ್ನು ಸಹ ಅತ್ಯಂತ ಅಚ್ಚುಕಟ್ಟಾಗಿ ಇಲ್ಲಿ ತೋರಿಸಲಾಗಿದೆ.

ಇದರ ನಂತರ ಹುಡುಗನಿಗೆ ಮದುವೆಯಾಗಿ ಮಕ್ಕಳಿದ್ದರೂ ಸಹ ಅದೇ ತಾಂಡಾದ ಮತ್ತೊರ್ವ ಕನ್ಯೆ ಹುಡುಗನನ್ನು ನೋಡಿ ಪ್ರೇಮಿಸುವುದು, ಇದಕ್ಕೆ ಸಮಾಜದ ವಿರೋಧ, ಪಂಚಾಯಿತಿಯಲ್ಲಿ ಅವರು ಒಟ್ಟಿಗೆ ಬದುಕಲು ಸಿಗುವ ಸಮ್ಮತಿ ಇವೆಲ್ಲವೂ ಸಹ ಪ್ರೇಕ್ಷಕರಿಗೆ ಎಲ್ಲಿಯೂ ಬೋರ್ ಆಗದಂತೆ ನೋಡಿಕೊಳ್ಳುತ್ತವೆ.

ಇನ್ನೂ ಬರೆಯುತ್ತಾ ಹೋದರೆ ಸಾಕಷ್ಟಿದೆ ಈ ನಾಟಕದ ಬಗ್ಗೆ, ನಾಟಕದ ಕೊನೆಯಲ್ಲಿ ಪ್ರಸ್ತುತ ತಾಂಡಾಗಳಿಂದ ಹೊರ ಬರುತ್ತಿರುವ ಅಕ್ಷರಸ್ಥ ಬಂಜಾರರು ನಗರಗಳಲ್ಲಿ ತಮ್ಮ ಅಸ್ಮಿತೆಯನ್ನು ಕಂಡುಕೊಳ್ಳುತ್ತಿರುವ ದೃಶ್ಯ ಕಂಡುಬರುತ್ತದೆ. ಹಾಗೆಯೇ ಬಂಜಾರರನ್ನು ಇತಿಹಾಸ ಹೇಗೆ ಮರೆಯಿತು ಎಂಬ ಪ್ರಶ್ನೆಗೆ ಇತಿಹಾಸ ಇನ್ನೂ ಅವರನ್ನು ಮರೆತಿಲ್ಲ ಎಂಬ ಉತ್ತರ ಈ ಮುಂದಿನ ಸಾಲುಗಳಲ್ಲಿ ಸಿಕ್ಕಿತು. "ಭವಿಷ್ಯಃ ಶತಶತಮಾನಗಳಿಂದ ಅನುಭವಿಸಿದ ಬವಣೆಗಳು, ಸಂಕಟಗಳು, ದಬ್ಬಾಳಿಕೆಗಳು, ಕಷ್ಟಗಳನ್ನು ಮೆಟ್ಟಿ ಇಂದಿಗೂ ಗಟ್ಟಿಯಾಗಿ ನಿಂತಿರುವ ಬಂಜಾರ ಸಮುದಾಯದ ಸಾಂಸ್ಕೃತಿಕ ಪರಂಪರೆಗೆ, ಅವರ ಕರಕುಶಲತೆಗೆ 2023 ರಲ್ಲಿ ಹಂಪಿಯಲ್ಲಿ ನಡೆದ ಉ–20 ಶೃಂಗಸಭೆಯಲ್ಲಿ ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ನಲ್ಲಿ ಜಾಗ ಸಿಗುವ ಮುಖಾಂತರ ಬಂಜಾರ ಸಂಸ್ಕೃತಿಗೆ ಜಾಗತಿಕ ಮನ್ನಣೆ ಸಿಕ್ಕಿರುವುದು ಇವೆಲ್ಲದರ ಫಲಶ್ರುತಿ ಎಂಬುದು ಸುಳ್ಳಲ್ಲ", ಈ ಅದ್ಭುತ ನಾಟಕದಿಂದ ಬಂಜಾರ ಸಂಸ್ಕೃತಿಯ ಬಗ್ಗೆ ಕೇವಲ ಎರಡು ಗಂಟೆಗಳಲ್ಲಿ ಆಳವಾದ ಅಧ್ಯಯನ ಮಾಡಲು ಸಾಧ್ಯವಾಯಿತು ಎಂದರೆ ಅದು ಅತಿಶಯೋಕ್ತಿಯಾಗಲಾರದು.





*** ನಾಗೇಂದ್ರ.ಟಿ.ಆರ್, ಶಿವಮೊಗ್ಗ**
**ಚಿತ್ರ: ಸ್ಪಂದನ ಚಂದ್ರು**

# ಅಪ್ಪನೆಂಬ ಆಕಾಶ....

ಅಪ್ಪ ಎಂದರೆ ಅವ್ಯಕ್ತ ಭಾವಗಳ ಆಗರ.ಮೌನದಲ್ಲೇ ಹೊತ್ತು ಸಾಗುವನು ಬದುಕಿನ ಭಾರ.ತನ್ನ ಆಸೆ ಕನಸುಗಳನ್ನು ತನ್ನೊಡಲ ಕುಡಿಗಳ ಶ್ರೇಯಸ್ಸಿನಲ್ಲಿ ಕಾಣುತ್ತಾ ದಡ ಸೇರುವವರೆಗೂ ಅವರೊಂದಿಗೆ ಇರುವ
ಶಕ್ತಿ. ಅಪ್ಪನೆಂದರೆ ಆಪ್ತಮಿತ್ರ. ಗೆದ್ದಾಗ ಬೆನ್ನು ತಟ್ಟುವಂತೆ ಸೋತಾಗ ಕೈ ಹಿಡಿದು ಮುನ್ನಡೆಸುವವ.ಅಪ್ಪ ಜೊತೆಗಿದ್ದರೆ ಬದುಕಿಗೊಂದು ಭರವಸೆ.ಅವನ ಅವಿರತ ಪರಿಶ್ರಮದ ಫಲ ಸದಾ ಕುಟುಂಬದ ಸುಖಕ್ಕಾಗಿಯೇ ಮೀಸಲು.ತನ್ನ ಕೊರತೆಗಳನ್ನು ಬಚ್ಚಿಡುತ್ತಾನೆ ಅದೆಷ್ಟು ಜಾಣತನದಿಂದ. ಮಕ್ಕಳ ನಗುವಿಗಾಗಿ ಅವನ ಕಂಗಳು ಹಂಬಲಿಸುತ್ತಲೇ ಇರುತ್ತವೆ.ಮಕ್ಕಳ ನೋವನ್ನು ಸಹಿಸದ ಶುದ್ಧ ಅಂತಃಕರಣ ಅಪ್ಪನದ್ದು.

ನನಗೆ ಅಪ್ಪನೆಂದರೆ ನನ್ನ ಚೈತನ್ಯ. ನಾನು ಸಹ ಅಪ್ಪನಂತೆ ಮೌನಿ.ಭಾವನೆಗಳನ್ನು ವ್ಯಕ್ತಪಡಿಸಲಾರೆವು.ಆದರೆ ಎಲ್ಲರ ಬಗ್ಗೆ ಸಾಗರದಷ್ಟು ಪ್ರೀತಿ.ಅಪ್ಪ ಮತ್ತು ನನ್ನ ನಡುವೆ ಇನ್ನೊಂದು ಸಾಮ್ಯತೆಯೆಂದರೆ ಕಷ್ಟ ಸಹಿಷ್ಣುತೆ ಮತ್ತು ತಾಳ್ಮೆ.ಅಪ್ಪನ ಮನದಾಳ ಅರಿತವರಷ್ಟೇ ಬಲ್ಲರು.ಅವನ
ಹೃದಯ ಪ್ರೀತಿಯ ಅರಮನೆ.ಮದುವೆಯಾಗಿ ಹೋಗುವ ಹೆಣ್ಣುಮಗಳ ಬೀಳ್ಕೊಡುವಾಗ ತುಂಬಿ ಬರುವ ಅವನ ಕಣ್ಣುಗಳಲ್ಲಿ ಅವನ ಹೆಗಲೇರಿ ಕುಣಿದ ಪುಟ್ಟಿಯ ನೆನಪುಗಳು.ಮದುವೆಗೆ ಒಂದು ವಾರ ಇರುವಾಗಲೇ ಅವನೆದೆಯಲ್ಲಿ ಚಡಪಡಿಕೆ.ಪುಟ್ಟಿಯಿಲ್ಲದ ಮನೆಯಲ್ಲಿ ಇನ್ನು ಮುಂದೆ ಸಂಜೆಗಳನ್ನು ಹೇಗೆ ಕಳೆಯಲಿ ಎಂಬ ಪ್ರಶ್ನೆ.ಅತ್ತು ಗೋಳಾಡಲಾರದೆ ಮೌನವಾಗಿ ಕುಳಿತು ಅವಳ ಫೋಟೋಗಳನ್ನು ನೋಡಿ ಯಾರಿಗೂ ಗೊತ್ತಾಗದಂತೆ ಕಣ್ಣೊರೆಸಿಕೊಂಡು ಮದುವೆ ಕೆಲಸಗಳಲ್ಲಿ ತೊಡಗಿಕೊಳ್ಳುವ ಅಪ್ಪನ ಅಂತರಂಗ ಅವನನ್ನು ಅಷ್ಟೇ
ಹಚ್ಚಿಕೊಂಡ ಮಗಳಿಗೆ ಮಾತ್ರ ಗೊತ್ತು.
ಮೊಮ್ಮಕ್ಕಳು ಬಂದ ಮೇಲೆ ಅಪ್ಪ ಮತ್ತೆ ಮಗುವಾಗುವನು.ಮಕ್ಕಳ ಓದು,ಉದ್ಯೋಗ,ಮದುವೆಯ ಜವಾಬ್ದಾರಿಗಳಿಂದ ಮುಕ್ತನಾಗಿ ಸ್ವಲ್ಪ ಹಗುರೆನಿಸುವ ಸಮಯದಲ್ಲಿ ಮಗಳು ಬಾಣಂತನಕ್ಕಾಗಿ ತವರಿಗೆ ಬಂದರೆ ಅಪ್ಪನ ಸಂಭ್ರಮ ಮೇರೆ ಮೀರುತ್ತದೆ.ಬೆಳಿಗ್ಗೆ ಎದ್ದು ಮೊಮ್ಮಗುವಿನ ಮುದ್ದು ಮುಖ ನೋಡಿ ತೋಟದ ಕೆಲಸಕ್ಕೆ ಹೋಗಿ ಮತ್ತೆ ಸಂಜೆ ಬಂದ ಕೂಡಲೇ ಮೊಮ್ಮಗುವಿನೊಂದಿಗೆ ಆಡಬೇಕು.ಮಗಳಿಗೆ ಏನು ಇಷ್ಟ ಎಲ್ಲಾ ತಂದುಕೊಡಬೇಕು.ಮಗಳು ಮೊಮ್ಮಗು ತವರಿನಲ್ಲಿ ಇದ್ದಷ್ಟು ದಿನ ಅವನೆದೆಯೊಳಗೆ ಬೆಚ್ಚಗಿನ ಭಾವ.

ಮೊಮ್ಮಕ್ಕಳು ಶಾಲೆಗೆ ಹೋಗುವವರಾದರೆ ರಜೆಯಲ್ಲಿ ಬರುವ ಅವರಿಗಾಗಿ ಕಾಯುತ್ತಾನೆ.ಬಗೆಬಗೆಯ ಸಿಹಿಗಳನ್ನು ಅವರಿಗೆಂದು ತಂದುಕೊಟ್ಟು ಕೀಟಲೆ ಮಾಡುತ್ತಾ ಮಗುವೇ ಆಗುತ್ತಾನೆ ಅಪ್ಪ.ಮುದ್ದು ಮಾಡಿ
ಮೊಮ್ಮಕ್ಕಳನ್ನು ಹಾಳು ಮಾಡಬೇಡ ಎಂಬ ಮಗಳ ಮಾತನ್ನು ಅವನು ಎಂದೂ ತಲೆಗೆ ಹಾಕಿಕೊಳ್ಳಲಾರ.
ಮೊಮ್ಮಕ್ಕಳೊಂದಿಗೆ ಆಡಿ ಹಾಡಿ ನಲಿಯುವ ಸುವರ್ಣ ಸಮಯದಲ್ಲಿ ಅವನಿಗೆ ಬೇರೇನೂ ರುಚಿಸದು.
ಅಪ್ಪ ತನ್ನ ಬೇಕುಗಳಿಗೆ ಎಂದಿಗೂ ಪ್ರಾಶಸ್ತ್ಯ ಕೊಡದವ.
ಮಾಸಿದ ಬಟ್ಟೆ,ಹಳೆಯದಾದ ಬೈಕ್ ಇವೆಲ್ಲವೂ ಅವನಿಗೆ ಗೌಣ.ಕುಟುಂಬದ ನೆಮ್ಮದಿ.ಮಕ್ಕಳ ಸಂತೋಷವೇ ಮುಖ್ಯ.ದುಡಿಯುವ ಮಕ್ಕಳು ಮನೆಗೆ ಬಂದು ಹೋಗುವಾಗ ಅವರು ತಂದುಕೊಟ್ಟ ಹೊಸ ಬಟ್ಟೆ, ವಾಚ್
ಎಲ್ಲವನ್ನೂ ತೊಟ್ಟು ಕನ್ನಡಿ ಮುಂದೆ ನಿಂತು ಹೆಮ್ಮೆಯಿಂದ ಬೀಗುವನು.ಅದೊಂದು ಸಾರ್ಥಕ ಭಾವ ಅವನೊಳಗೆ.
ಮಗ ಹೊಸ ಕಾರ್ ಖರೀದಿಸಿ ಮನೆ ಮುಂದೆ ತಂದು ನಿಲ್ಲಿಸಿದಾಗ ತಾನು ಅವನನ್ನು ಓದಿಸಲು ಬಸ್,ಆಟೋಗಳಲ್ಲಿ ಓಡಾಡಿದ ದಿನಗಳನ್ನು ನೆನಪಿಸಿಕೊಳ್ಳುತ್ತಾನೆ.ಮಗನೋ ಮಗಳೋ ಕಾರ್ ನಲ್ಲಿ ಕೂರಿಸಿಕೊಂಡು ಅವನಿಷ್ಟದ ಸ್ಥಳಗಳಿಗೆ ಕರೆದುಕೊಂಡು ಹೋದರೆ ಮನದೊಳಗೆ ಸಂಭ್ರಮಿಸುತ್ತಾನೆ.

ವರ್ಷ ಅರವತ್ತಾದರೂ ಇನ್ನೂ ಪಾದರಸದಂತೆ ಚುರುಕಾಗಿ ಹಳ್ಳಿಮನೆಯ ಕೆಲಸಗಳಲ್ಲಿ ತೊಡಗುವ ಅಪ್ಪನಿಗೆ ಸುಮ್ಮನೆ ಕೂರುವುದೆಂದರೆ ಆಗದು.ಈ ಕ್ರಿಯಾಶೀಲತೆಯೇ ಅವನ ಜೀವಂತಿಕೆ.ತೋಟದ ಗಿಡಗಳು, ಕೊಟ್ಟಿಗೆಯ ಹಸುಗಳು, ಕೆಲಸಕ್ಕೆ ಬರುವ ಆಳುಗಳು ಅವನ ಬದುಕಿನ ಅವಿಭಾಜ್ಯ ಅಂಗಗಳು.ಕಾಯಕನಿಷ್ಠೆಯೆಂದರೆ ಅಪ್ಪ.ಆಯಾಸವನ್ನು ಗಣಿಸದೆ ದುಡಿಮೆಯಲ್ಲಿ ಸಂತೋಷ ಕಾಣುವುದನ್ನು ಅಪ್ಪನಿಂದಲೇ ಕಲಿಯಬೇಕು.ಅರವತ್ತಾದರೂ ಯುವಕನಂತೆ ಕಾಣುವ ಅಪ್ಪನ ಜೀವನೋತ್ಸಾಹಕ್ಕೆ
ಅಪ್ಪನೇ ಸರಿಸಾಟಿ.

ಅಪ್ಪನೆಂದರೆ ಆಕಾಶ.ಅವನಿಲ್ಲದ ಮನೆಮನಗಳು ಶೂನ್ಯ.
ಅಪ್ಪನೆಂದರೆ ಅದಮ್ಯ ಚೈತನ್ಯ.



ಚೈತನ್ಯ ಸೂಸುವ ಕಂಗಳಲ್ಲಿ
ಆಡದ ನೂರು ಮಾತುಗಳು
ಮೌನವ ಹೊದ್ದು ಮಲಗಿವೆ
ತನ್ನ ಬೆವರು ಅಮೃತವಾಗಿ
ಒಡಲ ಕುಡಿಗಳ ಪೊರೆಯುತಿರಲು
ಪ್ರೀತಿ ತುಳುಕುವ ಹೃದಯವದು
ಮುಗುಳು ನಗುತಿದೆ
ಅವ್ಯಕ್ತ ಭಾವಗಳ ಆಗರವದು
ಮನ ನಂಬಿದವರ ದಡ ಸೇರಿಸುವ
ಗುರಿಯನೊಂದೆ ನಂಬಿದೆ
ಸುಖದಪೇಕ್ಷೆ ಇಲ್ಲದವನಿಗೆ
ಎಲ್ಲರ ನಗಿಸುವ ಹಂಬಲವಿದೆ
ನಿದ್ದೆ ತೊರೆದ ಕಂಗಳಲ್ಲಿ
ಸುಖದಿ ಮಲಗುವ ಮನೆಯೇ
ನಿತ್ಯದ ಕನಸಾಗಿದೆ
ತಾನುಣ್ಣದೆ ಉಡದೆ ದುಡಿವ
ಕಾರ್ಪಣ್ಯಗಳ ಮರೆಯಲ್ಲಿ
ಮುಂದಿನ ಚಿಗುರುಗಳ
ಹೆಮ್ಮರವಾಗಿಸುವ ಹೆಬ್ಬಯಕೆಯಿದೆ



**ಭವ್ಯ ಟಿ.ಎಸ್. ಶಿಕ್ಷಕಿ**
**ಹೊಸನಗರ, ಶಿವಮೊಗ್ಗ**

Hampi Times E-paper
SCAN AND READ



# Shanbhag Towers International (P) LTD

Shanbhag Circle, College Road, Hosapete-583201, Vijayanagara Dist.
Ph: 08394-225910 to 225914, M:8073847150, 9686603752, 9880419702 Email:shanbhagtowers@gmail.com

Shanbhag Towers International is a budget friendly hotel welcoming all travellers looking for a budget stay in a palace like structure. Our hotel interiors have been designed delicately with white marble featuring marvellous white stone carvings and statues imposing an air of peace and nobility. We are located in the heart of the city. The Railway station is merely 1.5 kms away and the KKRSTC Bus stand is within 500 Metres.

Internet/Wi-Fi | On Premise Parking | 24-hour front desk service | Bar | Restaurant | Breakfast | Laundry | Meeting/Banquet Facilities | ATM On Site | 24 Hours Power Backup | Elevator | Airport transfer | Rental car

Call Now 9482147421




## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

**19–06–2024 – ಬುಧವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ವಿಶಾಖ |
| ಯೋಗ | : ಸಿದ್ಧಿ |
| ಕರಣ | : ಬಾಳವ |
| ಸೂರ್ಯೋದಯ | : 05:42:55 |
| ಸೂರ್ಯಾಸ್ತ | : 19:13:56 |
| ರಾಹು | : 12:28–14:10 |
| ಯಮಘಂಡ | : 07:24–09:06 |
| ಗುಳಿಕ | : 10:47–12:28 |

## ತುಂಗಭದ್ರಾ ನೀರಿನ ಮಟ್ಟ



**ಮಂಗಳವಾರ : 18–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1582.81 ಅಡಿ |
| ಒಳ ಹರಿವು | 801 ಕ್ಯುಸೆಕ್ |
| ಹೊರ ಹರಿವು | 1752 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.979 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1580.31 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 2434 ಕ್ಯುಸೆಕ್ |
| ಸಾಮರ್ಥ್ಯ | 4.622ಟಿಎಂಸಿ |

# ಪಿಯುಸಿ, ಪದವಿ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಶುಲ್ಕ ವಸೂಲಿಗೆ ಎಸ್‌ಎಫ್‌ಐ ಖಂಡನೆ

## ಪ್ರಾಂಶುಪಾಲರ ಮೂಲಕ ಅಧ್ಯಕ್ಷರಿಗೆ ಮನವಿ । ಗ್ರಾಮೀಣ ಯುವಕರ ಪದವಿ ಕನಸು ನನಸಾಗಿಸಿ



■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ವಿಜಯನಗರ ಕಾಲೇಜಿನಲ್ಲಿ ಪಿಯುಸಿ ಮತ್ತು ಪದವಿ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಶುಲ್ಕ ವಸೂಲಿ ಮಾಡುವುದನ್ನು ವಿರೋಧಿಸಿ ಎಸ್‌ಎಫ್‌ಐ ಜಿಲ್ಲಾ ಸಮಿತಿ ಕಾರ್ಯಕರ್ತರು ವಿಜಯನಗರ ಕಾಲೇಜು ಪ್ರಾಂಶುಪಾಲರ ಮೂಲಕ ಅಧ್ಯಕ್ಷರಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಿದರು.

ಸಂಘಟನೆಯ ಜಿಲ್ಲಾ ಉಪಾಧ್ಯಕ್ಷ ಕೆ.ಎ.ಪವನಕುಮಾರ ಮಾತನಾಡಿ, ವಿಜಯನಗರ ಕಾಲೇಜುಗಳಲ್ಲಿ ಪ್ರತಿ ವರ್ಷದ ಹಾಗೆ ಈ ವರ್ಷವೂ ಪಿಯುಸಿ ಮತ್ತು ಪದವಿ ಕೋರ್ಸ್ ಆರಂಭದಲ್ಲಿ, ವಿದ್ಯಾರ್ಥಿಗಳಿಂದ ಸರ್ಕಾರಿ ಶುಲ್ಕದ ಜೊತೆಯಲ್ಲಿ ಕಾಲೇಜು ಆಡಳಿತ ಮಂಡಳಿಯವರು ಹೆಚ್ಚುವರಿ ಶುಲ್ಕ ವಸೂಲಿ ಮಾಡುತ್ತಿದ್ದಾರೆ. ಇದರಿಂದ ಹಳ್ಳಿಯ ಭಾಗದ ಬಡ ಕುಟುಂಬದ ವಿದ್ಯಾರ್ಥಿಗಳು ಪದವಿ ಪ್ರವೇಶ ಪಡೆಯಬೇಕೋ ಅಥವಾ ಬೇಡವೋ ಎನ್ನುವ ಗೊಂದಲದಲ್ಲಿ ವಿದ್ಯಾರ್ಥಿಗಳು ಇದ್ದಾರೆ. ಹೀಗಾಗಿ ಬಡ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ಕಾಲೇಜು ಆಡಳಿತ ಮಂಡಳಿ ಹೆಚ್ಚುವರಿ ಶುಲ್ಕ ವಸೂಲಿ ಮಾಡುವುದನ್ನು ನಿಲ್ಲಿಸಬೇಕು. ಬಡ ವಿದ್ಯಾರ್ಥಿಗಳ ಹಿತ ಕಾಯುವ ಕೆಲಸ ಮಾಡಬೇಕು ಎಂದು ಎಸ್‌ಎಫ್‌ಐ ಹೊಸಪೇಟೆ ತಾಲೂಕು ಸಮಿತಿ ವತಿಯಿಂದ ಕಾಲೇಜು ಪ್ರಾಂಶುಪಾಲರಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸ್ವೀಕರಿಸಿದ ಪಿ.ಯು, ಪದವಿ ಕಾಲೇಜಿನ ಪ್ರಾಂಶುಪಾಲರಾದ ನಿರಂಜನಮೂರ್ತಿ, ಪ್ರಭುಗೌಡ, ಇನ್ನೂ ಮೂರ್ನಾಲ್ಕು ದಿನದೊಳಗೆ ನಿಮ್ಮ ಸಂಘಟನೆ ಜೊತೆ ಚರ್ಚಿಸಿ, ಬೇಡಿಕೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಈ ಸಂಧರ್ಭದಲ್ಲಿ ರಾಜ್ಯ ಸಮಿತಿ ಸದಸ್ಯ ಶಿವಾರೆಡ್ಡಿ, ತಾಲೂಕು ಸಮಿತಿಯ ಲೋಕೇಶ ಸೇರಿದಂತೆ ಇತರರು ಇದ್ದರು.

# ವಿಜ್ಞಾನ

## ಆಕಳಿಕೆ ಏಕೆ ಬರುತ್ತದೆ?

■ **ಆರ್.ಬಿ.ಗುರುಬಸವರಾಜ**

ಶಿಕ್ಷಕರ ಏರು ಧ್ವನಿಯ ನಡುವೆಯೂ ಅರ್ಪಿತಗೆ ತರಗತಿಯಲ್ಲಿ ಆಕಳಿಕೆ ಬಂತು. ದೊಡ್ಡದಾಗಿ ಬಾಯಿ ತೆರೆದು ಆಕಳಿಸಿದಳು. ಶಿಕ್ಷಕರು 'ಏನಮ್ಮಾ ಅರ್ಪಿತ, ರಾತ್ರಿ ನಿದ್ದೆ ಮಾಡಿಲ್ಲವಾ? ಬೆಳ್ಳಂಬೆಳಿಗ್ಗೆ ಆಕಳಿಸುತ್ತಿದ್ದೀಯಲ್ಲ!" ಎಂದರು. ಸಹಪಾಠಿಗಳೆಲ್ಲ ನಕ್ಕರು. ಅರ್ಪಿತಗೆ ಸಂಕೋಚ ಎನಿಸಿತು. ಇದನ್ನು ಗಮನಿಸಿದ ಗುರುಗಳು ಆಕಳಿಕೆ ಬಗ್ಗೆ ವಿವರಿಸತೊಡಗಿದರು.

ಆಕಳಿಕೆಯಿಂದಾದ ಇಂತಹ ಸನ್ನಿವೇಶಗಳು ಸಹಜ. ಪ್ರತಿಯೊಬ್ಬರೂ ಒಂದಲ್ಲಾ ಒಂದು ಸಲ ಆಕಳಿಸುತ್ತಲೇ ಇರುತ್ತಾರೆ. ಇದು ಒಂದು ರೀತಿಯ ಸಮೂಹ ಸನ್ನಿ ಸಮಸ್ಯೆ. ಆಕಳಿಸುವವರನ್ನು ನೋಡಿದ ಕೂಡಲೇ ನಮಗೂ ಆಕಳಿಕೆ ಬರುತ್ತದೆ. ಆಕಳಿಕೆ ಬರಲು ನಿದ್ರಾ ಹೀನತೆಯೊಂದೇ ಕಾರಣವಲ್ಲ. ಆಕಳಿಕೆ ಬರಲು ನಿರ್ದಿಷ್ಟ ಕಾರಣವೇನೆಂದು ಇದುವರೆಗೂ ತಿಳಿದಿಲ್ಲ. ಆದರೆ ನಾವು ಏಕೆ ಆಕಳಿಸುತ್ತೇವೆ ಎಂಬುದಕ್ಕೆ ಹಲವಾರು ಸಿದ್ಧಾಂತಗಳಿವೆ.

ಒಂದು ಸಿದ್ಧಾಂತವೆಂದರೆ ಆಕಳಿಕೆ ನಮ್ಮ ರಕ್ತದಲ್ಲಿನ ಆಮ್ಲಜನಕ ಮತ್ತು ಇಂಗಾಲದ ಡೈಆಕ್ಸೈಡ್ ಪ್ರಮಾಣವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ನಾವು ಆಕಳಿಸಿದಾಗ ನಾವು ಹೆಚ್ಚಿನ ಪ್ರಮಾಣದ ಗಾಳಿಯನ್ನು ಉಸಿರಾಡುತ್ತೇವೆ. ಇದು ದೇಹದಲ್ಲಿ ಆಮ್ಲಜನಕದ ಮಟ್ಟವನ್ನು ಹೆಚ್ಚಿಸಲು ಮತ್ತು ಇಂಗಾಲದ ಡೈಆಕ್ಸೈಡ್ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ನಾವು ದಣಿದಿರುವಾಗ ಅಥವಾ ನಿದ್ದೆ ಬಂದಾಗ ಇದು ಪ್ರದರ್ಶಿತವಾಗುತ್ತದೆ.



ಮತ್ತೊಂದು ಸಿದ್ಧಾಂತದ ಪ್ರಕಾರ ಆಕಳಿಕೆಯು ಮೆದುಳನ್ನು ತಂಪಾಗಿಸಲು ಸಹಾಯ ಮಾಡುತ್ತದೆ. ನಾವು ಆಕಳಿಸಿದಾಗ ನಮ್ಮ ಬಾಯಿ ಮತ್ತು ಮೂಗುಗಳಿಗೆ ತಂಪಾದ ಗಾಳಿಯು ಸರಬರಾಜು ಆಗುತ್ತದೆ. ಇದು ತಲೆ ಮತ್ತು ಕುತ್ತಿಗೆಯಲ್ಲಿ ರಕ್ತದ ಉಷ್ಣತೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಈ ಕೂಲಿಂಗ್ ಪರಿಣಾಮವು ಮಾನಸಿಕ ಕಾರ್ಯಕ್ಷಮತೆಯನ್ನು ಸುಧಾರಿಸಲು ಮತ್ತು ಜಾಗರೂಕತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ಇನ್ನೊಂದು ಸಿದ್ಧಾಂತದ ಪ್ರಕಾರ ಆಕಳಿಕೆಯು ಪರಸ್ಪರ ಸಂವಹನದ ಪ್ರತಿಬಿಂಬವಾಗಿದೆ. ಆಕಳಿಕೆಯು ಇತರರಿಗೆ ವಿಶ್ರಾಂತಿ ಅಥವಾ ಬೇಸರದ ಅಗತ್ಯವನ್ನು ತಿಳಿಸುವ ಸಾಮಾಜಿಕ ಸಂಕೇತವಾಗಿದೆ ಎಂದು ಕೆಲವುಸಂಶೋಧಕರುನಂಬುತ್ತಾರೆ.ಆಕಳಿಕೆಯುಸಾಂಕ್ರಾಮಿಕವಾಗಿದ್ದು, ಇದು ಇತರರಿಗೆ ಭಾವನೆಗಳನ್ನು ಸಂವಹನ ಮಾಡುವ ಮಾರ್ಗವಾಗಿರ ಬಹುದು ಎಂದು ಸೂಚಿಸುತ್ತದೆ.

# ಕಟ್ಟಡ ನಿರ್ಮಾಣಕ್ಕೆ ಭೂಮಿ ಖರೀದಿಸಿ

ಎರಡನೆ ಪುಟದಿಂದ

ಶಾಲೆಗಳಿಗೆ ನಿವೇಶನ ಲಭ್ಯವಿದ್ದ ಕಡೆಗಳಲ್ಲಿ ವಾರದೊಳಗೆ ಟೆಂಡರ್ ಪ್ರಕ್ರಿಯೆ ನಡೆಸಿ ಕಾಮಗಾರಿ ಆರಂಭಿಸಬೇಕು. ಡಿಡಿಪಿಐ ಮತ್ತು ತಹಸೀಲ್ದಾರರು ಸಮನ್ವಯದಿಂದ ಕೆಲಸ ಮಾಡಬೇಕು ಎಂದು ನಿರ್ದೇಶನ ನೀಡಿದರು.

ಈಗ ಹೊಸದಾಗಿ ಮೂರು ಮೊರಾರ್ಜಿ ಶಾಲೆಗಳು ಮಂಜೂರಾಗಿವೆ. ಅವುಗಳಿಗೆ ಜಮೀನು ಬೇಕಿದೆ ಎಂದು ಡಿಡಿಪಿಐ ಅವರು ಸಭೆಗೆ ತಿಳಿಸಿದರು. ಯಾವ ಯಾವ ಕಡೆಗಳಲ್ಲಿ ಜಮೀನಿನ ಅಗತ್ಯವಿದೆಯೋ ಎಂಬುದರ ಬಗ್ಗೆ ಕೂಡಲೇ ಪತ್ರ ಬರೆದು ಪ್ರಕ್ರಿಯೆ ನಡೆಸಲು ರಾಯರೆಡ್ಡಿ ಅವರು ಡಿಡಿಪಿಐ ಅವರಿಗೆ ನಿರ್ದೇಶನ ನೀಡಿದರು.

ಯಲಬುರ್ಗಾ ಕ್ಷೇತ್ರಕ್ಕೆ ಈಗಾಗಲೇ 15 ಬಸ್ ನಿಲ್ದಾಣಗಳು ಮಂಜೂರಾಗಿವೆ. ತಲಾ ಒಂದು ಬಸ್ ನಿಲ್ದಾಣಕ್ಕೆ ಈಗಾಗಲೇ 3 ಕೋಟಿ ರೂ. ನಿಗದಿಪಡಿಸಲಾಗಿದೆ. ಕೂಡಲೇ ಟೆಂಡರ್ ಪ್ರಕ್ರಿಯೆ ನಡೆಸಿ ಕಾಮಗಾರಿಗಳನ್ನು ಆರಂಭಿಸಬೇಕು ಎಂದು ರಾಯರೆಡ್ಡಿ ಅವರು ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎಂಜಿನಿಯರುಗಳಿಗೆ ನಿರ್ದೇಶನ ನೀಡಿದರು.

ಯಲಬುರ್ಗಾ ಕ್ಷೇತ್ರದ ವಿವಿಧೆಡೆಯ 9 ಕಡೆಗೆ ನಿರ್ಮಾಣವಾಗುವ ಬಸ್ ನಿಲ್ದಾಣಗಳಿಗೆ ಕೆಕೆಆರ್‌ಡಿಬಿಯಿಂದ ಅನುದಾನ ನಿಗದಿಪಡಿಸಲಾಗಿದೆ. ಮುರುಡಿ, ಹಿರೇಮ್ಯಾಗೇರಿ, ಗಾಣದಾಳು, ಮಂಡಲಗೇರಿ, ಹಿರೇಅರಳಿಹಳ್ಳಿ ಮತ್ತು ಬೆಣಕಲ್ ಗ್ರಾಮಗಳಲ್ಲಿ ಬಸ್ ನಿಲ್ದಾಣಗಳ ನಿರ್ಮಾಣಕ್ಕೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಅನುದಾನ ನಿಗದಿಪಡಿಸಲಾಗಿರುತ್ತದೆ ಎಂದು ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ತಹಸೀಲ್ದಾರರು, ವಿವಿಧ ಇಲಾಖೆಗಳ ಅಧಿಕಾರಿಗಳು, ಅಭಿಯಂತರರು, ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯ, ಕೊಪ್ಪಳ ವಿಶ್ವವಿದ್ಯಾಲಯದ ಕುಲಸಚಿವರು, ಜಿಲ್ಲಾ ನ್ಯಾಯಾಂಗ ಇಲಾಖೆಯ ಅಧಿಕಾರಿಗಳು, ಸೇರಿದಂತೆ ಇನ್ನಿತರರಿದ್ದರು.


**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com


# ಸಿಎಂ ಅಧ್ಯಕ್ಷತೆಯ ಸಭೆಯ ಹೈಲೈಟ್ಸ್

ಎರಡನೆ ಪುಟದಿಂದ

1994–95 ರಲ್ಲಿ ಹಣಕಾಸು ಸಚಿವನಾಗಿದ್ದಾಗ, ದಲಿತ ಸಂಘರ್ಷ ಸಮಿತಿಯವರು ಸಾರಾಯಿ ಬೇಡ; ವಸತಿ ಶಾಲೆಗಳು ಬೇಕು ಎಂಬ ಬೇಡಿಕೆಯಿಟ್ಟಿದ್ದರು. ಅವಕಾಶ ವಂಚಿತರಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಸ್ಥಾಪಿಸಲಾಗಿದೆ ಎಂದು ಸ್ಮರಿಸಿದರು.

ಪರಿಶಿಷ್ಟ ಪಂಗಡದ ವಸತಿ ಶಾಲೆಗಳಲ್ಲಿ 108 ಸ್ವಂತ ಕಟ್ಟಡ ಹೊಂದಿದ್ದು, 30 ಬಾಡಿಗೆ ಕಟ್ಟಡಗಳಲ್ಲಿ ಹಾಗೂ 6 ಬಾಡಿಗೆ ರಹಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಸ್ವಂತ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳೊಂದಿಗೆ ಖುದ್ದಾಗಿ ಅನುಸರಣೆ ಮಾಡುವಂತೆ ಸೂಚಿಸಿದರು.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಹಣಕಾಸು ಇಲಾಖೆಯ ಸೂಚನೆಯಂತೆ 2023–24 ರಲ್ಲಿ ಲಭ್ಯವಿದ್ದ 263 ಕೋಟಿ ರೂ. ಖಜಾನೆಗೆ ಜಮಾ ಮಾಡಲಾಗಿದೆ. ಯಾವುದೇ ಯೋಜನೆಯಡಿ ಫಲಾನುಭವಿಗಳ ಆಯ್ಕೆಯಾಗಿಲ್ಲ. ಪ್ರತಿ ವರ್ಷ ಮಾಡಬೇಕಲ್ಲ. ಯಾಕೆ ಮಾಡಿಲ್ಲ ಎಂದು ಪ್ರಶ್ನಿಸಿದಾಗ, ಶಾಸಕರು ಫಲಾನುಭವಿಗಳ ಪಟ್ಟಿ ನೀಡಿಲ್ಲ. ಆಯ್ಕೆ ಮಾಡಬೇಕಾದ ಫಲಾನುಭವಿಗಳ ಸಂಖ್ಯೆ ಅತ್ಯಂತ ಕಡಿಮೆ ಇರುವುದರಿಂದ ಸಂದಿಗ್ಧ ಪರಿಸ್ಥಿತಿ ಎದುರಾಗುವ ಹಿನ್ನೆಲೆಯಲ್ಲಿ ಶಾಸಕರು ಆಯ್ಕೆ ಮಾಡಲು ಆಸಕ್ತಿ ತೋರಿಸುತ್ತಿಲ್ಲ ಎಂದು ತಿಳಿಸಿದರು. ಫಲಾನುಭವಿಗಳ ಸಂಖ್ಯೆ ಹೆಚ್ಚಿಸುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು ಸೂಚಿಸಿದರು.

22 ಪ್ರಕರಣಗಳಲ್ಲಿ ಸಿಂಧುತ್ವ ಪ್ರಮಾಣ ಪತ್ರ ಹಲವು ವರ್ಷಗಳಿಂದ ಇತ್ಯರ್ಥಕ್ಕೆ ಬಾಕಿ ಇದ್ದು, ಇವುಗಳಲ್ಲಿ ಎಲ್ಲ ಪ್ರಕರಣಗಳನ್ನು ಸಿ.ಆರ್.ಇ. ಸೆಲ್‌ಗೆ ಕಳುಹಿಸದಂತೆ, ಗೊಂದಲವಿದ್ದಲ್ಲಿ ಮಾತ್ರ ಕಳುಹಿಸುವಂತೆ ಸುತ್ತೋಲೆ ಹೊರಡಿಸಲು ಸೂಚಿಸಿದರು. ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಅಪರ ಮುಖ್ಯ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಮತ್ತು ಇತರ ಹಿರಿಯ ಅಧಿಕಾರಿಗಳಿದ್ದರು.






## ಪುರಸಭೆ ಕಾರ್ಯಾಲಯ ಹಗರಿಬೊಮ್ಮನಹಳ್ಳಿ

ವಿಜಯನಗರ ಜಲ್ಲೆ, ಕರ್ನಾಟಕ

ಸಂ/ಪುಹಬೊ/ಮಾರುಕಟ್ಟೆ–ಟೆಂಡರ್/2024–25 ದಿನಾಂಕ:18.06.2024

### ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

ಹಗರಿಬೊಮ್ಮನಹಳ್ಳಿ ಪಟ್ಟಣದ ಸಮಸ್ತ ನಾಗರೀಕರಿಗೆ ತಿಳಿಸುವುದೇನಂದರೆ ಸನ್ 2024–25ನೇ ಸಾಲಿನ ಅವಧಿಗೆ ಅಂದರೆ ದಿನಾಂಕ:01.07.2024 ರಿಂದ 31.03.2025 ರ ವರೆಗೆ ಹಗರಿಬೊಮ್ಮನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ 1.ದಿನವಹಿ ಹಾಗೂ ವಾರದ ಸಂತೆ, ತಳ್ಳುಗಾಡಿ ಮತ್ತು ಡಬ್ಬ ಅಂಗಡಿಗಳ ಸುಂಕ ವಸೂಲಿ ಹಾಗೂ 2. ಜಾನುವಾರುಗಳ ಸಂತೆ ಸುಂಕ ವಸೂಲಿ ಮಾಡುವ ಹಕ್ಕನ್ನು ಪಡೆಯಲು ದಿನಾಂಕ:27.06.2024 ರಂದು ಮಧ್ಯಾಹ್ನ:12.00 ಗಂಟೆಯಿಂದ ಹಗರಿಬೊಮ್ಮನಹಳ್ಳಿ ಪುರಸಭೆ ಕಛೇರಿಯ ಸಭಾಂಗಣದಲ್ಲಿ ಬಹಿರಂಗ ಹರಾಜನ್ನು ಮುಖ್ಯಾಧಿಕಾರಿಗಳಾಗಲಿ ಅಥವಾ ಅವರಿಂದ ಅಧಿಕಾರ ಪಡೆದವರು ನಡೆಸುತ್ತಾರೆ. ಮಾರುಕಟ್ಟೆಗಳ ಸುಂಕ ವಸೂಲಿ ಹಕ್ಕನ್ನು ಪಡೆಯುವ ಆಸಕ್ತಿಯುಳ್ಳವರು ಈ ಕೆಳಕಾಣಿಸಿದ ಮುಂಗಡ ಠೇವಣಿ ಮೊತ್ತಕ್ಕೆ ಬ್ಯಾಂಕಿನಿಂದ ಡಿ.ಡಿ ಯನ್ನು ಪಡೆದು ಅರ್ಜಿಯೊಂದಿಗೆ ಲಗತ್ತಿಸಿ ದಿನಾಂಕ:25.06.2024 ರಂದು ಸಾಯಂಕಾಲ:05.00 ಗಂಟೆಯೊಳಗಾಗಿ ಪುರಸಭೆಗೆ ಅರ್ಜಿ ಸಲ್ಲಿಸಿ ಹರಾಜಿನಲ್ಲಿ ಭಾಗವಹಿಸಬಹುದು. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ವಸೂಲಾತಿ ಧರಗಳು ಮತ್ತು ಷರತ್ತುಗಳು ಪುರಸಭೆಯಿಂದ ಮುದ್ರಿಸಿದ ಕರಪತ್ರಗಳನ್ನು ಪಡೆದು ಮತ್ತು ಪುರಸಭೆ ಕಾರ್ಯಾಲಯದ ವೆಬ್‌ಸೈಟ್ ವಿಳಾಸ: www.hagaribommanahallitown.mrc.gov.in ರಲ್ಲಿ ಪಡೆದು ಓದಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕೆಲಸದ ವೇಳೆಯಲ್ಲಿ ಸಂಬಂಧಪಟ್ಟ ವಿಷಯ ನಿರ್ವಾಹಕರಿಂದ ಪಡೆಯಬಹುದಾಗಿದೆ.

| ಕ್ರ.ಸಂ. | ಹರಾಜು ವಿವರ | ಠೇವಣಿ ಮೊತ್ತ |
|---|---|---|
| 1 | ದಿನವಹಿ & ವಾರದ ಸಂತೆ, ತಳ್ಳುವಗಾಡಿ ಹಾಗೂ ಡಬ್ಬಾ ಅಂಗಡಿಗಳ ಸುಂಕ ವಸೂಲಿ. | ರೂ.1,00,000=00 (ಬ್ಯಾಂಕ್‌ನಿಂದ ಪಡೆದ ಡಿ.ಡಿ.) |
| 2 | ಜಾನುವಾರುಗಳ ಸಂತೆ ಸುಂಕ ವಸೂಲಿ. | ರೂ.1,00,000=00 (ಬ್ಯಾಂಕ್‌ನಿಂದ ಪಡೆದ ಡಿ.ಡಿ.) |

1. ಟೆಂಡರ್ ನಲ್ಲಿ ಭಾಗವಹಿಸುವ ಟೆಂಡರ್‌ದಾರರು ಅರ್ಜಿಯ ಜೊತೆಯಲ್ಲಿ ನಿಗಧಿಪಡಿಸಿದ ಠೇವಣಿ ಮೊತ್ತಕ್ಕೆ ಮುಖ್ಯಾಧಿಕಾರಿ ಪುರಸಭೆ ಹಗರಿಬೊಮ್ಮನಹಳ್ಳಿ ಇವರ ಹೆಸರಿನಲ್ಲಿ ಡಿ.ಡಿ ಪಡೆದು ಸಲ್ಲಿಸತಕ್ಕದ್ದು, 2. ಪುರಸಭೆಯಿಂದ ಮುದ್ರಿಸಿದ ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆಯ ಕರ ಪತ್ರಗಳನ್ನು ಪಡೆದು ಅದರಲ್ಲಿ ನಮೂದಿಸಿದ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. 3. ಸಮಾಧಾನಕರವಾದ ಟೆಂಡರ್ ದೊರೆತ ಪಕ್ಷದಲ್ಲಿ ಮಾತ್ರ ಹೆಚ್ಚು ಟೆಂಡರ್ ಕೂಗಿದವರ ಹೆಸರಿನಲ್ಲಿ ಗುತ್ತಿಗೆಯನ್ನು ಮಾನ್ಯ ಆಡಳಿತಾಧಿಕಾರಿಗಳು ಪುರಸಭೆ ಹಗರಿಬೊಮ್ಮನಹಳ್ಳಿ ಇವರ ಮಂಜೂರಾತಿ ಮೇರೆಗೆ ಟೆಂಡರ್ ಅನುಮೋದನೆ ಮಾಡಲಾಗುವುದು. ಸಂಪೂರ್ಣ ಹರಾಜಿನ ಮೊತ್ತವನ್ನು ಹರಾಜು ಕೂಗಿದ ದಿನ ಅಥವಾ ಮರು ದಿನದೊಳಗೆ ಪಾವತಿಸತಕ್ಕದ್ದು, ಒಂದುವೇಳೆ ಹರಾಜಿನ ಮೊತ್ತ ಪಾವತಿಸದಿದ್ದಲ್ಲಿ ಹರಾಜು ರದ್ದುಪಡಿಸಲಾಗುವುದು. ಹಾಗೂ ನೀವು ಸಲ್ಲಿಸಿದ ಠೇವಣಿ ಮೊತ್ತವನ್ನು ಪುರಸಭೆಗೆ ಮುಟ್ಟುಗೋಲಿ ಹಾಕೊಳ್ಳಲಾಗುವುದು. 4. ಹರಾಜುದಾರರು ಹರಾಜಿನ ಬಿಡ್ ಮೊತ್ತವನ್ನು ರೂ.5000/– ಗಣಕದ ಏರಿಕೆಯಲ್ಲಿ ಕೂಗತಕ್ಕದ್ದು

ಸಹಿ/– (ಶ್ರೀ ಪ್ರಭಾಕರ ಕೆ.ಎಂ.ಎ.ಎಸ್ ಗ್ರೇಡ್–1)
ಮುಖ್ಯಾಧಿಕಾರಿಗಳು, ಪುರಸಭೆ ಹಗರಿಬೊಮ್ಮನಹಳ್ಳಿ.

ಸಹಿ/– (ಶ್ರೀ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ್ ಶಾ ಐ.ಎ.ಎಸ್)
ಆಡಳಿತಾಧಿಕಾರಿಗಳು, ಪುರಸಭೆ ಹಗರಿಬೊಮ್ಮನಹಳ್ಳಿ.


## ಬೇಕಾಗಿದ್ದಾರೆ

Marketing Executive

> Any Graduate Can apply
> Good communication & Convincing skills
> Ability to work independently




Attractive remuneration and Excellent career development opportunities wait to the right candidate
Job Location: HOSAPETE - VIJAYANAGARA Dist.
94825 99089
94486 33038


# ಪರಿಶಿಷ್ಟ ಪಂಗಡ ಇಲಾಖೆ: ಕಾನೂನು ವೃತ್ತಿ ತರಬೇತಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಪಂಗಡದ ಕಾನೂನು ಪದವೀಧರರಿಗೆ ಕಾನೂನು ವೃತ್ತಿ ತರಬೇತಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ ಅವರು ತಿಳಿಸಿದ್ದಾರೆ.

ಪರಿಶಿಷ್ಟ ಪಂಗಡದ ಕಾನೂನು ಪದವೀಧರರಿಗೆ 2024–25 ನೇ ಸಾಲಿನ ಆಡಳಿತ ನ್ಯಾಯಾಧೀಕರಣದಲ್ಲಿ ಎರಡು ವರ್ಗಗಳ ವೃತ್ತಿ ತರಬೇತಿಯಲ್ಲಿ ಶಿಷ್ಯವೇತನ ನೀಡಲಾಗುತ್ತದೆ.

ಅರ್ಹ ಪದವೀಧರರು ಜೂನ್ 30ರ ಒಳಗಾಗಿ ಇಲಾಖೆಯ ವೆಬ್‌ಸೈಟ್ www.tw.kar.nic.in ಗೆ ಭೇಟಿ ನೀಡಿ ಅರ್ಜಿಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ನಲ್ಲಚೆರವು ಪ್ರದೇಶದಲ್ಲಿನ ವಾಲ್ಮೀಕಿ ಭವನದ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಜೂನ್ 20 ರಂದು ನೇರ ಸಂದರ್ಶನ

**ಹಂಪಿ ಟೈಮ್ಸ್ ಬಳ್ಳಾರಿ**

ಕೈಗಾರಿಕ ತರಬೇತಿ ಮತ್ತು ಉದ್ಯೋಗ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಕಚೇರಿ ಇವರ ಸಹಯೋಗದೊಂದಿಗೆ ಆವಾಸ್ ಫೈನಾನ್ಸಿಯರ್ಸ್ ಲಿಮಿಟೆಡ್ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇರ ಸಂದರ್ಶನ ಮೂಲಕ ಭರ್ತಿ ಮಾಡಿಕೊಳ್ಳಲು ಜೂನ್ 20 ರಂದು ನೇರ ಸಂದರ್ಶನ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಹಟ್ಟಪ್ಪ ಅವರು ತಿಳಿಸಿದ್ದಾರೆ.

ಪಿಯುಸಿ ಅಥವಾ ಯಾವುದೇ ಪದವಿ ಮುಗಿಸಿದ ಆಸಕ್ತ ಅಭ್ಯರ್ಥಿಗಳು ಆಧಾರ್ ಕಾರ್ಡ್ ಮತ್ತು ತಮ್ಮ ಸ್ವ–ವಿವರದೊಂದಿಗೆ ನಗರದ ಪಾರ್ವತಿ ನಗರದಲ್ಲಿನ ಎಸ್‌ಎಲ್‌ವಿ ಟವರ್ ಹತ್ತಿರದ 2ನೇ ಮಹಡಿ, ನಂಬರ್–3ರ ಆವಾಸ್ ಫೈನಾನ್ಸಿಯರ್ಸ್ ಲಿಮಿಟೆಡ್ ಆಫಿಸ್ ಕಚೇರಿಯಲ್ಲಿ ನಡೆಯುವ ಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ಮೊ:9742718891, 9900827768, ಅಥವಾ 8277000619 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA